PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

E NAMMA DHURTHI NEWS KANNADA DAILY NEWS PAPER

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 225 ಪುಟಗಳು: 04 ಬೆಲೆ: 02 ದಿನಾಂಕ: 25-10-2026 ಭಾನುವಾರ | email: enammadhruthinews@gmail.com | Pho : 7353595904




# ಗೋಲ್ಡನ್ ಚಾರಿಯೇಟ್ ಐಷಾರಾಮಿ ಪ್ರವಾಸಿ ರೈಲಿಗೆ ಸಿಎಂ ಚಾಲನೆ

**ಧೃತಿ ನ್ಯೂಸ್ ಸುದ್ದಿ**

ಬೆಂಗಳೂರು: ಕರ್ನಾಟಕ ದರ್ಶನಕ್ಕಾಗಿ ರೂಪಿಸಲಾಗಿದ್ದ ಗೋಲ್ಡನ್ ಚಾ-ರಿಯೇಟ್ ಐಷಾರಾಮಿ ಪ್ರವಾಸಿ ರೈಲು ಸೇವೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮರು ಚಾಲನೆ ನೀಡಿದ್ದಾರೆ.ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ಹಾಗೂ ರೈಲ್ವೆ ಇಲಾಖೆಯ ಅಧಿಕಾರಿಗಳು ಇದರಲ್ಲಿ ಭಾಗವಹಿಸಿದ್ದರು. ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ, ವೀಡಿಯೊ ಕಾನ್ಫರೆನ್?ಸನಲ್ಲಿ ಭಾಗವಹಿಸಿದರು.ನಕ್ಷೆಗಳನ್ನು ನೋಡಿ ಈ ಹಿಂದೆ ಸಿದ್ದರಾಮಯ್ಯ ಅವರ ಮೊದಲ ಅವಧಿಯ ಸರ್ಕಾರ ಆರಂಭಗೊಂಡಿದ್ದ ಗೋಲ್ಡನ್ ಚಾರಿಯೇಟ್ ಮಧ್ಯದಲ್ಲಿ ಕೆಲಕಾಲ ಸ್ಥಗಿ-ತಗೊಂಡಿತ್ತು. ಈಗ ಮತ್ತೆ ಆರಂಭಿಸಲಾಗಿದೆ. ರೈಲಿಗೆ ಚಾಲನೆ ನೀಡಿ, ಸ್ವಲ್ಪ ದೂರ ಪ್ರಯಾಣ ಮಾಡಿದ ಡಿ.ಕೆ.ಶಿವಕುಮಾರ್ ಅವರು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಇದು ಕರ್ನಾಟಕದ ಹೆಮ್ಮೆ. ರಾಜ್ಯ ಪ್ರವಾಸವನ್ನು ಈವರೆಗೂ ಮಾಡದೇ ಇರುವವರಿಗೆ ಉತ್ತಮ ಅವಕಾಶ. 5 ರಾತ್ರಿ, 6 ದಿನಗಳ ಪ್ರವಾಸದಲ್ಲಿ ಬಂಡೀಪುರ, ಮೈಸೂರು, ಹಳೇಬೀಡು, ಚಿಕ್ಕಮಗಳೂರು, ಹಂಪಿ ಸೇ-ರಿದಂತೆ ಎಲ್ಲೆಡೆ ಪ್ರವಾಸ ಮಾಡಲು ಅವಕಾಶ



ಇದೆ. ಒಂದು ಅವಧಿಯಲ್ಲಿ 80 ಜನ ಪ್ರವಾಸ ಮಾಡಬಹುದಾಗಿದ್ದು, 60 ಜನ ಸಿಬ್ಬಂದಿಗಳು ಸೇವೆ ಒದಗಿಸಲಿದ್ದಾರೆ. ರೈಲಿನಲ್ಲಿ ಎರಡು ರೆಸ್ಟೋರೆಂಟ್‌ಗಳಿವೆ. ಸ್ಪಾ, ಜಿಮ್ ಸೇ-ರಿದಂತೆ ಹಲವು ಐಷಾರಾಮಿ ಸೌಲಭ್ಯಗಳನ್ನು ಅಳವಡಿಸಲಾಗಿದೆ. ರೈಲಿನಲ್ಲಿ ವಿಶ್ರಾಂತಿಗೆ ಅವಕಾಶ ಇದೆ. ಪ್ರವಾಸಿ ತಾಣಗಳ ವೀಕ್ಷಣೆಗೂ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು. ಪ್ರಯಾಣದ ವೆಚ್ಚ ತುಸು ದುಬಾರಿಯಾಗಿದೆ. ಆಫ್ ಸೀಜನ್‌ನಲ್ಲಿ ಜನಸಾಮಾನ್ಯರ ಕೈಗೆಟಕುವಂತೆ ಕಡಿಮೆ ದರ ನಿಗದಿ ಮಾಡುವ ಬಗ್ಗೆಯೂ ಚರ್ಚೆಗಳೂ ನಡೆಯುತ್ತಿವೆ ಎಂದರು.

ಮೊದಲ ಹಂತದಲ್ಲಿ 75 ಜನ ಈ ಪ್ರಯಾಣ-ಕ್ಕೆ ಮುಂಗಡವಾಗಿ ನೊಂದಾಯಿಸಿಕೊಂಡಿದ್ದಾರೆ ಎಂದು ಹೇಳಿದರು.

ರೈಲು ಕರ್ನಾಟಕ ಸರ್ಕಾರಕ್ಕೆ ಸೇರಿದ್ದು. ಆದರೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯ ಮಾರ್ಗಗಳನ್ನು ಬಳಸಿಕೊಳ್ಳುತ್ತಿದ್ದೇವೆ. ಪ್ರಯಾಣದ ಮಾರ್ಗವನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆಯೂ ಚಿಂತನೆ ಇದೆ. ನಿಯಮಿತವಾದ ರೈಲು ಮಾರ್ಗಗಳಿಗೆ ತೊಂದರೆಯಾಗದಂತೆ ಯೋಜನೆ ರೂಪಿಸುವುದಾಗಿ ಹೇಳಿದರು. ಇದಲ್ಲದೆ 4 ದಿನಗಳ ಗ್ಲಿಂಪ್?ಸ ಆಫ್ ಕರ್ನಾಟಕ ಆರಂಭಿಸುವ ಆಲೋಚನೆ ಕೂಡ ಇದೆ. ಜ್ಯೂವೆಲ್ ಸ ಆಫ್ ಸೌತ್ ಯೋಜನೆಯಲ್ಲಿ ದಕ್ಷಿಣ ಭಾರತದ ಅನೇಕ ಪ್ರವಾಸ ತಾಣಗಳಿಗೆ ಪ್ರವಾಸಿಗರನ್ನು ಕರೆದೊಯ್ಯಲು ಯೋಜನೆ ಸಿದ್ಧಗೊಂಡಿದೆ. ಹಂಪಿ, ಮಹಾಬಲಿಪುರಂ, ಮೈಸೂರು, ಬೆಂಗಳೂರು, ಕೊಚ್ಚಿನ್, ಚಿಟ್ಟಿನಾಡು ಸೇರಿದಂತೆ ಮತ್ತಿತರ ತಾಣಗಳಿಗೆ ಪ್ರಯಾಣದ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು. ದೇಶದಲ್ಲಿ ಈ ರೀತಿಯ 4 ರೈಲುಗಳು ಮಾತ್ರ ಇವೆ. ಅದರಲ್ಲಿ ಕರ್ನಾಟಕ ಮತ್ತು ರಾಜಸ್ತಾನದ ರೈಲುಗಳು ಐಷಾರಾಮಿ ಸೌಲಭ್ಯ ಹೊಂದಿವೆ. ಮುಂಬೈನಲ್ಲಿ ಈ ರೀತಿಯ ರೈಲು ಇದ್ದರೂ ಅದು ಸಾಮಾನ್ಯ ಸೌಲಭ್ಯಗಳು ಹೊಂದಿದೆ ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆಯಿಂದ ಆಯೋಜಿಲಾಗಿರುವ ಈ ಯೋಜನೆಗಳಿಂದ ಲಾಭವಾಗದಿದ್ದರೂ ನಷ್ಟವಾಗಬಾರದು. ಕರ್ನಾಟಕದ ಅಪರಿಮಿತವಾದ ವನ್ಯ ಸಂಪತ್ತು, ಪ್ರಕೃತಿ ಹಾಗೂ ನಾಡಿದ ಪಾರಂಪರಿಕ ತಾಣಗಳನ್ನು ವಿದೇಶಿಗರಿಗೆ ಪರಿಚಯಿಸುವುದು ತಮ ಆದ್ಯತೆ ಎಂದರು. ಗೋಲ್ಡನ್ ಚಾರಿಯೇಟ್ ರೈಲು ನೋಡಿ ತಮಗೆ ಖುಷಿಯಾಗಿದೆ. ಇದರಲ್ಲಿ ಪ್ರಯಾಣ ಮಾಡಲು ತಮಗೆ ಯಾವಾಗ ಅವಕಾಶ ಸಿಗಲಿದೆ ಎಂಬುದನ್ನು ಕಾದು ನೋಡುವುದಾಗಿ ತಿಳಿಸಿದರು.

## ಪ್ರಿಯಾಂಕಾ ಜಾರಕಿಹೊಳಿ ಸಿಎ ಗೌತಮ್ ಪಾಟೀಲ್ ವಿವಾಹ ನಿಶ್ಚಿತಾರ್ಥ : ಸರಳ ಸಮಾರಂಭದಲ್ಲಿ ಮಿಂದೆದ್ದ ಸಂಭ್ರಮ



**ಧೃತಿ ನ್ಯೂಸ್ ಸುದ್ದಿ**

ಗೋಕಾಕ: ರಾಜಕೀಯ ಪ್ರಭಾವ, ಅಧಿಕಾರದ ಸ್ಥಾನಮಾನ ಹಾಗೂ ಸಾರ್ವಜನಿಕ ಜೀವನದಲ್ಲಿ ವಿಶೇಷ ಗುರುತಿಸಿಕೊಂಡಿರುವ ಜಾರಕಿಹೊಳಿ ಕುಟುಂಬದಲ್ಲಿ ಸಂತಸದ ಸಂಭ್ರಮ ಮನೆಮಾಡಿದೆ. ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರ ವಿವಾಹ ನಿಶ್ಚಿತಾರ್ಥವು ಅಕ್ಟೋಬರ್ 23ರಂದು ಗೋಕಾಕದ ಸ್ವಗೃಹದ ಹಿಲ್ ಗಾರ್ಡನ್‌ನಲ್ಲಿ ಸರಳವಾಗಿ ನೆರವೇರಿತು.

ರಾಯಚೂರು ಮೂಲದ ಸಿಎ ಗೌತಮ್ ಪಾಟೀಲ್ ಜೊತೆ ವಿವಾಹ ನಿಶ್ಚಿತಾರ್ಥ! ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಂಬಲಾದಿನ್ನಿ ಮೂಲದ, ನಿವೃತ್ತ ಆರ್‌ಟಿಒ ಅವರ ಪುತ್ರ ಹಾಗೂ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಗೌತಮ್ ಪಾಟೀಲ್ ಅವರೊಂದಿಗೆ ಪ್ರಿಯಾಂಕಾ ಜಾರಕಿಹೊಳಿ ಅವರ ವಿವಾಹ ನಿಶ್ಚಿತಾರ್ಥ ನೆರವೇರಿದೆ. ಈ ಸಂತಸದ ಸಮಾರಂಭದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರ ಕುಟುಂಬದ ಸದಸ್ಯರಾದ ರಮೇಶ್, ಬಾಲಚಂದ್ರ, ಲಖನ್ ಸೇರಿದಂತೆ ಇಡೀ ಜಾರಕಿಹೊಳಿ ಕುಟುಂಬದವರು ಒಟ್ಟಾಗಿ ಭಾಗವಹಿಸಿ ಭಾವಿ ದಂಪತಿಗೆ ಶುಭ ಹಾರೈಸಿದರು. ಅದ್ದೂರಿತನಕ್ಕೆ ಅವಕಾಶವಿದ್ದರೂ ಸರಳತೆಗೆ ಆದ್ಯತೆ! ಸಾಮಾನ್ಯವಾಗಿ ಪ್ರಭಾವಿ ರಾಜಕೀಯ ಕುಟುಂಬಗಳಲ್ಲಿನ ಶುಭ ಸಮಾರಂಭಗಳು ಅದ್ದೂರಿ ಆಚರಣೆ ಹಾಗೂ ವೈಭವದ ಮೂಲಕ ಗಮನ ಸೆಳೆಯುತ್ತವೆ. ಆದರೆ ಸಚಿವ ಸತೀಶ್ ಜಾರಕಿಹೊಳಿ ಅವರು ತಮ್ಮ ಪುತ್ರಿಯ ವಿವಾಹ ನಿಶ್ಚಿತಾಥ-ರ್ವನ್ನು ಸರಳವಾಗಿ ಆಯೋಜಿಸುವ ಮೂಲಕ ಮತ್ತೊಮ್ಮೆ ಗಮನ ಸೆಳೆದಿದ್ದಾರೆ. ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಲೋಕೋಪಯೋಗಿ ಇಲಾಖೆ ಸಚಿವರಾಗಿರುವ ಸತೀಶ್ ಜಾರಕಿಹೊಳಿ ಅವರು ರಾಜಕೀಯ ಕ್ಷೇತ್ರದಲ್ಲಿ ಪ್ರಭಾವಿ ನಾಯಕರೆಂದು ಗುರುತಿಸಿಕೊಂಡಿದ್ದಾರೆ. ಇಂತಹ ಪ್ರಭಾವಿ ಕುಟುಂಬದಲ್ಲಿ ಅದ್ದೂರಿ ಸಮಾರಂಭ ನಡೆಸುವ ಅವಕಾಶವಿದ್ದರೂ, ಕುಟುಂಬದ ಆಪ್ತರ ಸಮ್ಮುಖದಲ್ಲಿ ಸರಳವಾಗಿ ನಿಶ್ಚಿತಾರ್ಥ ನೆರವೇರಿಸಿರುವುದು ವಿಶೇಷವಾಗಿದೆ. ಕುಟುಂಬದ ಒಗ್ಗಟ್ಟು, ಸರಳತೆಯ ಸಂಭ್ರಮ! ಜಾರಕಿಹೊಳಿ ಕುಟುಂಬದ ಪ್ರಮುಖ ಸದಸ್ಯರೆಲ್ಲರೂ ಒಂದಾಗಿ ಸೇರಿ ಭಾವಿ ದಂಪತಿಗೆ ಶುಭ ಹಾರೈಸಿರುವುದು ಸಮಾರಂಭದ ವಿಶೇಷ ಆಕರ್ಷಣೆಯಾಗಿತ್ತು. ರಾಜಕೀಯ ಮತ್ತು ಸಾರ್ವಜನಿಕ ಜೀವನದ ಕಾರ್ಯಬಾಹುಳ್ಯದ ನಡುವೆಯೂ ಕುಟುಂಬದ ಸಂತಸದ ಕ್ಷಣವನ್ನು ಒಟ್ಟಾಗಿ ಆಚರಿಸಿರುವುದು ಕುಟುಂಬದ ಒಗ್ಗಟ್ಟನ್ನು ಪ್ರತಿಬಿಂಬಿಸಿದೆ. ಅಧಿಕಾರವಿದ್ದರೂ ಆಡಂಬರವಿಲ್ಲ; ಪ್ರಭಾವವಿದ್ದರೂ ಸರಳತೆಗೆ ಆದ್ಯತೆ?ಪ್ರಿಯಾಂಕಾ ಜಾರಕಿಹೊಳಿ ಅವರ ವಿವಾಹ ನಿಶ್ಚಿತಾರ್ಥದ ಮೂಲಕ ಜಾರಕಿಹೊಳಿ ಕುಟುಂಬ ಗಮನ ಸೆಳೆದಿದೆ.

## ಗೀಗಿಪದ ಕಲಾವಿದೆ ಮುದುಕವ್ವ ಗಂಜಿಹಾಳ ಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಯ ಗರಿ

**ಧೃತಿ ನ್ಯೂಸ್ ಸುದ್ದಿ**

ಕುಷ್ಟಗಿ: ತಾಲೂಕಿನ ಹಿರೇಗೊಣ್ಣಾಗರ ಗ್ರಾಮದ ಗೀಗಿ ಪದ ಹಾಡುಗಾರ್ತಿ ಶ್ರೀಮತಿ ಮುದುಕವ್ವ ಗಂಜಿಹಾಳ ಅವರಿಗೆ 2026 ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಗೌರವ



ಪ್ರಶಸ್ತಿ ದೊರಕಿದೆ, ಕಳೆದ ನಾಲ್ಕು ದಶಕಗಳಿಂದ ಮೂಲ ಜಾನಪದ ಕಲಾ ಪ್ರಕಾರಗಳಲ್ಲಿ ಪರದೇಶಿ ನಾಗೇಶಿ ಪರಂಪರೆಯ ಗೀಗಿ ಪದಗಾರ್ತಿಯಾದ ಮುದುಕವ್ವ ಗಂಜಿಹಾಳ ಗೆ ನಾಲ್ಕು ದಶಕಗಳ ಜಾನಪದ ಸಲಾ ಸೇವೆಯನ್ನ ಪರಿಗಣಿಸಿ ಕರ್ನಾಟಕ ಜಾನಪದ ಅಕಾಡೆಮಿಯು ಈ ಸಾಲಿನ ಜಾನಪದ ಅಕಾಡೆಮಿ ಗೌರವ ಪುರಸ್ಕಾರವನ್ನು ನೀಡಿ ಗೌರವಿಸಿರುವುದು ಹೆಮ್ಮೆಯ ಸಂಗತಿಯಾಗಿದೆ ಪ್ರಶಸ್ತಿ ಪುರಸ್ಕೃತರಾದ ಮುದುಕವ ಗಂಜಿಹಾಳವರಿಗೆ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಡಾ ಜೀವನಸಾಬ ವಾಲಿಕಾರ ಬಿನ್ನಾಳ ಅವರು ಹಾರ್ದಿಕವಾಗಿ ಅಭಿನಂದಿಸಿ ಶುಭ ಹಾರೈಸಿದ್ದಾರೆ.

## ಕಡೆಕೊಪ್ಪ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ ಸ್ವಾತಂತ್ರ್ಯ ಹೋರಾಟದ ವೀರ ಮಹಿಳೆ ಚೆನ್ನಮ್ಮ ಅವರ ಸಾಹಸ, ಶೌರ್ಯ ಸ್ಮರಣೆ

**ಧೃತಿ ನ್ಯೂಸ್ ಸುದ್ದಿ**

**ವರದಿ: ಅಮರೇಶ ತಾರಿವಾಳ**

ದೋಟಿಹಾಳ: ಸಮೀಪದ ಕಡೆಕೊಪ್ಪ ಗ್ರಾಮದ ವತಿಯಿಂದ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಜಯಂತಿಯನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು. ಸಮಾಜದ ಮುಖಂಡ ದೊಡ್ಡನಗೌಡ ಪಾಟೀಲ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, ರಾಣಿ ಚೆನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಅರ್ಪಿಸಿದರು.

ಬ್ರಿಟಿಷರ ಆಳ್ವಿಕೆಯ ವಿರುದ್ಧ ಧೈರ್ಯದಿಂದ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮ ಅವರು ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆ. ತಮ್ಮ ರಾಜ್ಯದ ಸ್ವಾಭಿಮಾನ, ಸ್ವಾತಂತ್ರ್ಯ ಮತ್ತು ಜನರ ಹಿತಕ್ಕಾಗಿ ಹೋರಾಡಿದ ಅವರ ಜೀವನ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಸಮಾಜದ ಮುಖಂಡ ದೊಡ್ಡನಗೌಡ ಪಾಟೀಲ ಅವರು, ರಾಣಿ ಚೆನ್ನಮ್ಮ ಅವರ ಧೈರ್ಯ, ಸಾಹಸ,



ದೇಶಪ್ರೇಮ ಮತ್ತು ತ್ಯಾಗದ ಗುಣಗಳನ್ನು ಇಂದಿನ ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಹನೀಯರ ಜಯಂತಿಗಳನ್ನು ಆಚರಿಸುವುದರ ಜೊತೆಗೆ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು.

ಕಿತ್ತೂರು ರಾಣಿ ಚೆನ್ನಮ್ಮ ಅವರ ಹೋರಾಟದ ಬದುಕು ಮಹಿಳಾ ಶಕ್ತಿ, ಸ್ವಾಭಿಮಾನ ಹಾಗೂ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಧೈರ್ಯಕ್ಕೆ ಸಾಕ್ಷಿಯಾಗಿದೆ. ಇಂತಹ ಮಹಾನ್ ವೀರ ಮಹಿಳೆಯ ಇತಿಹಾಸವನ್ನು ಮಕ್ಕಳಿಗೆ ಹಾಗೂ ಯುವಜನರಿಗೆ ತಿಳಿಸುವುದು ಪ್ರತಿಯೊಬ್ಬರ ಜವಾಬ್ದಾ-ರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಇದೆ ಸಂದರ್ಭದಲ್ಲಿ ಸಮಾಜದ.ಮುಖಂಡರಾದ ಮಲ್ಲಿಕಾರ್ಜುನ ಗೌಡ ಪಾಟೀಲ್ ವಿರೇಶಯ್ಯ ನಿಡಗುಂದಿ ಮಠ ವಿರುಪಾಕ್ಷಿ ನಂದಿಹಾಳ ನಿಂಗಪ್ಪ ಜಿಗೇರಿ ಮಹೇಶ ಜಿಗೇರಿ ಉಮೇಶ ಹನುಮಸಾಗರ ಅಶೋಕ್ ಇತರಿದ್ದರು.

## ಸೌರಭ ಸಾಂಸ್ಕೃತಿಕ ಕಲಾ ಬಳಗದ ವಾರ್ಷಿಕೋತ್ಸವಕ್ಕೆ ಸಿದ್ಧತೆ



**ಧೃತಿ ನ್ಯೂಸ್ ಸುದ್ದಿ**

ಕುಷ್ಟಗಿ: ಸೌರಭ ಸಾಂಸ್ಕೃತಿಕ ಕಲಾ ಬಳಗ ಹಿರೇಮನ್ನಾಪುರ ಸಂಸ್ಥೆಯ ವತಿಯಿಂದ ಕುಷ್ಟಗಿ ನಗರದ ಶ್ರೀ ಬುತ್ತಿ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಸಂಸ್ಥೆಯ ವಾರ್ಷಿಕೋತ್ಸವದ ಪೂರ್ವಭಾವಿ ಸಭೆ ಜರುಗಿತು.

ಸಭೆಯಲ್ಲಿ ಸಂಸ್ಥೆಯ ವಾರ್ಷಿಕೋತ್ಸವವನ್ನು ಯಶಸ್ವಿಯಾಗಿ ಆಯೋಜಿಸುವ ಕುರಿತು ಪದಾಧಿಕಾರಿಗಳು ಚರ್ಚೆ ನಡೆಸಿದರು. ವಾರ್ಷಿಕೋತ್ಸವದ ಅಂಗವಾಗಿ ಸಂಸ್ಥೆಗೆ ನೂತನ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವುದು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಕರೋಕೆ ಗಾಯನ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳುವ ಕುರಿತು ಸಮಾಲೋಚನೆ ನಡೆಸಲಾಯಿತು. ಸಭೆಯಲ್ಲಿ ಚರ್ಚಿಸಿದ ಬಳಿಕ 2026ರ ಡಿಸೆಂಬರ್ 6ರಂದು ಭಾನುವಾರ ಬೆಂಗಳೂರಿನಲ್ಲಿ ಸಂಸ್ಥೆಯ ವಾರ್ಷಿಕೋತ್ಸವವನ್ನು ಆಚರಿಸಲು ಸರ್ವಾನುಮತದಿಂದ ನಿರ್ಧರಿಸಲಾಯಿತು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ರೆಹಮಾನ್ ಸಾಬ್ ಹೆಚ್. ಕೋಳೂರು, ಉಪಾಧ್ಯಕ್ಷರಾದ ಭೀಮಸೇನರಾವ್ ಕುಲಕರ್ಣಿ, ಖಜಾಂಚಿ ಹುಸೇನ್ ಭಾಷಾ ಮುಜಾವರ, ಸದಸ್ಯರಾದ ಶರಣಯ್ಯ ಪೊಲೀಸ್ ಪಾಟೀಲ್, ವಿರೂಪಾಕ್ಷಪ್ಪ ದೇಸಾಯಿ ಹಾಗೂ ಮುದಕಪ್ಪ ಕನ್ನಾಳ ಉಪಸ್ಥಿತರಿದ್ದರು.

## ಚೆನ್ನಮ್ಮಳ ಧೈರ್ಯ, ಶೌರ್ಯ ಯುವಜನತೆಗೆ ಸದಾ ಪ್ರೇರಣೆ : ತಹಶೀಲ್ದಾರ್ ಸಿದರಾಯ ಬೋಸಗಿ ವೀರರಾಣಿ ಚೆನ್ನಮ್ಮ ಜಯಂತಿ ಆಚರಣೆ । ಚೆನ್ನಮ್ಮ ವೃತ್ತದಲ್ಲಿ ಪ್ರತಿಮೆ ನಿರ್ಮಾಣಕ್ಕೆ ಕರವೇ ಆಗ್ರಹ

**ಧೃತಿ ನ್ಯೂಸ್ ಸುದ್ದಿ**

ಬೆಳಗಾವಿ/ಅಥಣಿ: ಬ್ರಿಟಿಷರ ದಬ್ಬಾಳಿಕೆಗೆ ಎದೆಗುಂದದೆ ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ನಾಡಿನ ಗೌರವಕ್ಕಾಗಿ ಕೆಚ್ಚೆದೆಯಿಂದ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮಳ ಧೈರ್ಯ, ಶೌರ್ಯ ಹಾಗೂ ಅಪ್ರತಿಮ ದೇಶಪ್ರೇಮ ಇಂದಿನ ಯುವಜನತೆಗೆ ಸದಾ ಪ್ರೇರಣೆಯಾಗಬೇಕು ಎಂದು ಅಥಣಿ ತಹಶೀಲ್ದಾರ್ ಸಿದ್ದರಾಯ ಬೋಸಗಿ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಹಾಗೂ ಚೆನ್ನಮ್ಮ ವೃತ್ತದಲ್ಲಿ ಶುಕ್ರವಾರ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಣಿ ಚೆನ್ನಮ್ಮಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮಳ ಹೆಸರು ಅಜರಾಮರವಾಗಿದೆ. ಬ್ರಿಟಿಷರ ದಬ್ಬಾಳಿಕೆಯನ್ನು ಧೈರ್ಯದಿಂದ ಎದುರಿಸಿ, ವಸಾಹತುಶಾಹಿ ಆಡಳಿತದ ವಿರುದ್ಧ ಹೋರಾಡಿದ ಕನ್ನಡ ನಾಡಿನ ದಿಟ್ಟ ಮಹಿಳೆಯಾಗಿ ಅವರು ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಅವರ ಜೀವನ ಕೇವಲ ಇತಿಹಾಸದ ಪುಟಗಳಿಗೆ ಸೀಮಿತವಾಗದೆ, ಪ್ರತಿಯೊಬ್ಬರಲ್ಲೂ ದೇಶಪ್ರೇಮ, ಆತ್ಮವಿಶ್ವಾಸ ಮತ್ತು ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವ ಬೆಳೆಸಬೇಕು ಎಂದರು.




ಚೆನ್ನಮ್ಮ ಜಯಂತಿ ಕೇವಲ ಭಾವಚಿತ್ರಕ್ಕೆ ಹೂವು ಅರ್ಪಿಸುವ ಆಚರಣೆಯಾಗಬಾರದು. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು. ವಿಶೇಷವಾಗಿ ಇಂದಿನ ಯುವಜನರು ಹಾಗೂ ಯುವತಿಯರು ಅವರ ಸಾಹಸಗಾಥೆಯಿಂದ ಪ್ರೇರಣೆ ಪಡೆದು ಸಮಾಜದಲ್ಲಿ ಧೈರ್ಯ, ಸ್ವಾಭಿಮಾನ ಮತ್ತು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಿದ್ದರಾಯ ಬೋಸಗಿ ಕರೆ ನೀಡಿದರು.

**ಪಠ್ಯಪುಸ್ತಕದ ಇತಿಹಾಸವಲ್ಲ, ಯುವಜನರ ಚೇತನದ ಸಂಕೇತ ಚೆನ್ನಮ್ಮ ವೃತ್ತದಲ್ಲಿ ಪ್ರತಿಮೆ ನಿರ್ಮಿಸಲು ಆಗ್ರಹ**

ಕರವೇ ಅಧ್ಯಕ್ಷ ಶಬ್ಬೀರ್ ಸಾತಬಚ್ಚೆ ಮಾತನಾಡಿ, ದೇಶದ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕಾಗಿ ಹೋರಾಡಿದ ವೀರರಾಣಿ ಕಿತ್ತೂರು ಚೆನ್ನಮ್ಮಳ ಆದರ್ಶಗಳು ಎಲ್ಲ-ರಿಗೂ ಸ್ಫೂರ್ತಿಯಾಗಿವೆ. ಅವರ ಹೆಸ-ರಿನಲ್ಲಿರುವ ಅಥಣಿಯ ಚೆನ್ನಮ್ಮ ವೃತ್ತವನ್ನು ಇನ್ನಷ್ಟು ಅಭಿವೃದ್ಧಿಪಡಿಸುವುದರ ಜೊತೆಗೆ, ಅಲ್ಲಿ ವೀರರಾಣಿ ಚೆನ್ನಮ್ಮಳ ಪ್ರತಿಮೆ ನಿರ್ಮಿಸಲು ಪುರಸಭೆ ಹಾಗೂ ತಾಲೂಕು ಆಡಳಿತ ಇಚ್ಛಾಶಕ್ತಿ ತೋರಬೇಕು ಎಂದು ಒತ್ತಾಯಿಸಿದರು. ಚೆನ್ನಮ್ಮಳ ಹೋರಾಟದ ಸ್ಮರಣೆಯನ್ನು ಮುಂದಿನ ಪೀಳಿಗೆಗೂ ಜೀವಂತವಾಗಿಡಲು ಪಟ್ಟಣದಲ್ಲಿ ಅವರ ಪ್ರತಿಮೆ ನಿರ್ಮಾಣ ಮಹತ್ವದ ಹೆಜ್ಜೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

**ಗಣ್ಯರ ಉಪಸ್ಥಿತಿ**

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ, ಸಿಪಿಐ ಲಕ್ಕಪ್ಪ ಅಗ್ನಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಅಭಿಯಂತರರು ವೀರಣ್ಣ ವಾಲಿ, ಕೃಷಿ ಅಧಿಕಾರಿ ನಿಂಗನಗೌಡ ಪಾಟೀಲ, ತಾಲೂಕ ವೈದ್ಯಾಧಿಕಾರಿ ಡಾ. ಬಸಗೌಡ ಕಾಗೆ, ಹೆಸ್ಕಾಂ ಅಧಿಕಾರಿ ಗುರುರಾಜ ಸಂಪಣ್ಣವರ, ಬಿಸಿಎಂ ಅಧಿಕಾರಿ ವೆಂಕಟೇಶ ಕುಲಕರ್ಣಿ, ಪ್ರವೀಣ ಹುಣಸೀಕಟ್ಟಿ ಸೇರಿದಂತೆ ಕನ್ನಡಪರ ಹೋರಾಟಗಾರರು ಹಾಗೂ ವೀರರಾಣಿ ಕಿತ್ತೂರು ಚೆನ್ನಮ್ಮಳ ಅಭಿಮಾನಿಗಳು ಉಪಸ್ಥಿತ-ರಿದ್ದರು. ನಾಡಿನ ಸ್ವಾಭಿಮಾನಕ್ಕೆ ಸಂಕೇತವಾದ ಚೆನ್ನಮ್ಮಳ ಸಾಹಸಗಾಥೆ ಯುವ ಹೃದಯಗಳಲ್ಲಿ ಸದಾ ಜೀವಂತವಾಗಿರಲಿ; ಅವರ ಆದರ್ಶಗಳು ಹೊಸ ಪೀಳಿಗೆಯ ಬದುಕಿಗೆ ದಾರಿದೀಪವಾಗಲಿ ಎಂಬ ಆಶಯದೊಂದಿಗೆ ಜಯಂತಿ ಆಚ-ರಿಸಲಾಯಿತು.

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ಕಾರು ಅಪಘಾತದಲ್ಲಿ ಪ್ರಾಣಾಪಾಯದಿಂದ ಪಾರಾದ ಕಾಂಗ್ರೆಸ್ ಶಾಸಕ



ಮಲಪ್ಪುರಂ: ಇಂದು ನಸುಕಿನ ಜಾವ 2 ಗಂಟೆ ಸುಮಾರಿಗೆ ಇಲ್ಲಿನ ಕೋಝಿಚೇನಾ ಬಳಿಯ ರಾಷ್ಟ್ರೀಯ ಹೆದ್ದಾರಿ–66ರಲ್ಲಿ ಕಾಂಗ್ರೆಸ್ ಶಾಸಕ ಸಂದೀಪ್ ವಾರಿಯರ್ ಪ್ರಯಾಣಿಸುತ್ತಿದ್ದ ಕಾರಿನ ಟೈರ್ ಸಿಡಿದು ರಸ್ತೆ ಬದಿಯ ಗೋಡೆಗೆ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಶಾಸಕರು ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಪೊಲೀಸರ ಪ್ರಕಾರ, ಕಾಸರಗೋಡು ಜಿಲ್ಲೆಯ ತ್ರಿಕ್ಕರಿಪುರದಲ್ಲಿರುವ ತಮ್ಮ ಕ್ಷೇತ್ರದಿಂದ ಮಲಪ್ಪುರಂನ ಚಥಲ್ಲೂರ್‌ಗೆ ಪ್ರಯಾಣಿಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

ಟೈರ್ ಸಿಡಿದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ಗೋಡೆಗೆ ಡಿಕ್ಕಿ ಹೊಡೆಯಿತು ಎಂದು ಪೊಲೀಸರು ಹೇಳಿದ್ದಾರೆ. ಈ ಘಟನೆಯ ಬೆನ್ನಲ್ಲೇ, ಶಾಸಕರ ವಾಹನದ ಹಿಂದೆಯೇ ಬರುತ್ತಿದ್ದ ಮತ್ತೊಂದು ಕಾರು ಮೂರನೇ ವಾಹನವೊಂದಕ್ಕೆ ಡಿಕ್ಕಿ ಹೊಡೆಯಿತು ಎಂದು ಅವರು ತಿಳಿಸಿದ್ದಾರೆ. ಶಾಸಕರು ಸೇರಿದಂತೆ ಈ ಮೂರು ಕಾರುಗಳಲ್ಲಿದ್ದ ಎಲ್ಲ ಪ್ರಯಾಣಿಕರು ಯಾವುದೇ ಗಾಯಗಳಿಲ್ಲದೆ ಸುರಕ್ಷಿತವಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಸಂಚಾರ ದಟ್ಟಣೆಯನ್ನು ತಡೆಯಲು ಅಪಘಾತಕ್ಕೀಡಾದ ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ನಿವೃತ್ತ ನ್ಯಾಯಾಧೀಶರಿಗೆ 2.5 ಕೋಟಿ ವಂಚನೆ ; ಮತ್ತೊಬ್ಬ ಆರೋಪಿ ವಶಕ್ಕೆ



ಕೊಚ್ಚಿ: ನಿವೃತ್ತ ನ್ಯಾಯಾಧೀಶರೊಬ್ಬರಿಗೆ ಡಿಜಿಟಲ್ ಬಂಧನದ ಹೆಸರಿನಲ್ಲಿ ವಂಚಿಸಿ, ಅವರಿಂದ 2.5 ಕೋಟಿ ರೂಪಾಯಿ ದೋಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಸ್ಥಾನ ಪೊಲೀಸರು ಮತ್ತೊಬ್ಬ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊಚ್ಚಿ ನಗರ ಪೊಲೀಸರು, ಇಲ್ಲಿನ ಎಲಮಕ್ಕರ ನಿವಾಸಿ ಎಬಿನ್ ಬಸಿಲ್ ಎಂಬಾತನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಇದಕ್ಕೂ ಮುನ್ನ, ರಾಜಸ್ಥಾನ ಪೊಲೀಸರು ಕೊಚ್ಚಿ ಪೊಲೀಸರ ನೆರವಿನೊಂದಿಗೆ ವರಪುಳದ ಮನ್ನಂತುರುತು ನಿವಾಸಿ ಆನಂದ್ ಬಾಬು ಎಂಬಾತನನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿದ್ದರು. ನಿವೃತ್ತ ನ್ಯಾಯಾಧೀಶರಿಂದ ವಂಚಿಸಲಾದ ಹಣವನ್ನು ಕೇರಳದಲ್ಲಿ ಆರೋಪಿಗಳು ಹೊಂದಿದ್ದ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ವಂಚನೆಯಲ್ಲಿ ಕೇರಳದ ಇನ್ನೂ ಕೆಲವರು ಭಾಗಿಯಾಗಿರುವ ಶಂಕೆ ಇರುವುದರಿಂದ, ರಾಜಸ್ಥಾನ ಪೊಲೀಸರು ರಾಜ್ಯದಲ್ಲಿ ತಮ್ಮ ತನಿಖೆಯನ್ನು ಮುಂದುವರಿಸಿದ್ದಾರೆ ಎಂದು ಅಧಿಕಾ–ರಿಗಳು ಮಾಹಿತಿ ನೀಡಿದ್ದಾರೆ. ಸಂತ್ರಸ್ತರಾದ 90 ವರ್ಷದ ಮಾಜಿ ಜಿಲ್ಲಾ ನ್ಯಾಯಾಧೀಶ ಗಣಪತ್ ಸಿಂಗ್ ಭಂಡಾರಿ ಅವರಿಗೆ ಸಿಬಿಐ ಅಧಿಕಾರಿಗಳು ಮತ್ತು ಆರ್‌ಬಿಐ ವ್ಯವಸ್ಥಾಪಕರ ಸೋಗಿನಲ್ಲಿ ಬಂದ ವಂಚಕರು 2.5 ಕೋಟಿ ರೂಪಾಯಿಗಳನ್ನು ದೋಚಿದ್ದಾರೆ. ಈ ವರ್ಷದ ಆಗಸ್ಟ್‌ನಲ್ಲಿ ಸುಮಾರು 15 ದಿನಗಳ ಕಾಲ ಅವರನ್ನು ಡಿಜಿಟಲ್ ಬಂಧನದಲ್ಲಿ ಇರಿಸಿದ್ದರು ಎಂದು ಆರೋಪಿಸಲಾಗಿದೆ. ಪುಲ್ವಾಮಾ ಪ್ರಕರಣಕ್ಕೆ ಸಂಬಂಧಿಸಿದ ಹವಾಲಾ ವ್ಯವಹಾರಗಳಲ್ಲಿ ನಿವೃತ್ತ ನ್ಯಾಯಾಧೀಶರಿಗೆ ನಂಟಿದೆ ಎಂದು ಆರೋಪಿಗಳು ಸುಳ್ಳು ಹೇಳಿ, ಆ ಪ್ರಕರಣದಲ್ಲಿ ಬಂಧಿಸುವುದಾಗಿ ಬೆದರಿಕೆ ಹಾಕಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಡಿಜಿಟಲ್ ಬಂಧನ ಎಂಬುದು ಒಂದು ರೀತಿಯ ಸೈಬರ್ ವಂಚನೆಯಾಗಿದ್ದು, ಇದರಲ್ಲಿ ವಂಚಕರು ಪೊಲೀಸ್ ಅಥವಾ ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ಬಂದು, ಸಂತ್ರಸ್ತರನ್ನು ಅಪರಾಧ ಪ್ರಕರಣವೊಂದಕ್ಕೆ ತಳುಕು ಹಾಕಿ, ಅವರನ್ನು ಬಂಧಿಸುವುದಾಗಿ ಬೆದರಿಸುತ್ತಾರೆ. ಅವರು ಸಂತ್ರಸ್ತರನ್ನು ಗಂಟೆಗಟ್ಟಲೆ ಅಥವಾ ದಿನಗಟ್ಟಲೆ ವಿಡಿಯೋ ಕರೆಯಲ್ಲಿ ಇರಿಸಿಕೊಂಡು, ಅವರ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸುವ ನೆಪದಲ್ಲಿ ಹಣವನ್ನು ವರ್ಗಾಯಿಸುವಂತೆ ಒತ್ತಾಯಿಸುತ್ತಾರೆ.

## ಸೌಜನ್ಯ ಕೊಲೆ ಪ್ರಕರಣ : ತಾಯಿಯಿಂದ ಡಿಎನ್‌ಎ ಮಾದರಿ ಸಂಗ್ರಹ



ಬೆಳ್ತಂಗಡಿ: ಸೌಜನ್ಯ ಕೊಲೆ ಪ್ರಕರಣದ ಮರುತನಿಖೆಯ ಭಾಗವಾಗಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಸೌಜನ್ಯ ಅವರ ತಾಯಿ ಕುಸುಮಾವತಿಯವರ ರಕ್ತದ ಮಾದರಿಯನ್ನು ಸಂಗ್ರಹಿಸಿದ್ದಾರೆ.

ನಿನ್ನೆ ಸಂಜೆ 4.30ರಿಂದ 6 ಗಂಟೆಯವರೆಗೆ ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಈ ಪ್ರಕ್ರಿಯೆ ನಡೆಯಿತು. ಎಸ್‌ಐಟಿ ತನಿಖಾಧಿಕಾರಿ ಲೋಕೇಶ್ ಜಗಲಾಸರ್ ಅವರ ನೇತೃತ್ವದಲ್ಲಿ ಬೆಳ್ತಂಗಡಿ ತಾಲೂಕು ಸರ್ಕಾರಿ ಆಸ್ಪತ್ರೆಯ ವೈದ್ಯರ ತಂಡವು ಕುಸುಮಾವತಿಯವರ ರಕ್ತದ ಮಾದರಿಯನ್ನು ಸಂಗ್ರಹಿಸಿತು. ನ್ಯಾಯಾಲಯದ ಬಾಗಿಲು ಮುಚ್ಚಿ, ವಿಡಿಯೊ ಚಿತ್ರೀಕರಣದ ಮೂಲಕ ವೈದ್ಯರ ತಂಡವು ವಿವಿಧ ಕಿಟ್‌ಗಳನ್ನು ಬಳಸಿ ರಕ್ತದ ಮಾದರಿಯನ್ನು ಸಂಗ್ರಹಿಸಿತು. ಬಳಿಕ ಮಾದರಿಯನ್ನು ಸೀಲ್ ಮಾಡಿ ಎಸ್‌ಐಟಿ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಸಂಗ್ರಹಿಸಲಾದ ಮಾದರಿಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗುತ್ತದೆ. ಅಲ್ಲಿಂದ ವರದಿ ಬಂದ ಬಳಿಕ ಎಸ್‌ಐಟಿ ಅಧಿಕಾ–ರಿಗಳು ಮುಂದಿನ ತನಿಖಾ ಪ್ರಕ್ರಿಯೆ ಕೈಗೊಳ್ಳಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ವಾಂಟೆಡ್ ಗ್ಯಾಂಗ್‌ಸ್ಟರ್‌ಗಳಾದ ಹಿಮಾಂಶು ಭಾವು, ನೀರಜ್ ಫರೀದ್‌ಪುರಿಯಾ ಅಮೆರಿಕದಲ್ಲಿ ಅರೆಸ್ಟ್



ನವದೆಹಲಿ: ಭಾರತದಲ್ಲಿ ಕೊಲೆ, ಕೊಲೆಯತ್ನ, ಗುಂಡಿನ ದಾಳಿ ಹಾಗೂ ಸುಲಿಗೆ ಸೇ–ರಿದಂತೆ ಹಲವು ಕ್ರಿಮಿನಲ್ ಪ್ರಕರಣಗಳಲ್ಲಿ ಬೇಕಾಗಿರುವ ಹರಿಯಾಣ ಮೂಲದ ಗ್ಯಾಂಗ್‌ಸ್ಟರ್‌ಗಳಾದ ಹಿಮಾಂಶು ಭಾವು ಮತ್ತು ನೀರಜ್ ಫರೀದ್‌ಪುರಿಯಾ ಅವರನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಹರಿಯಾಣ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ನೀಡಿದ ಮಾಹಿತಿಯ ಆಧಾರದ ಮೇಲೆ ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ಇಬ್ಬರನ್ನೂ ಬಂಧಿಸಿದೆ.

ಬಂಧನದ ಬಳಿಕ ಇಬ್ಬರನ್ನೂ ಭಾರತಕ್ಕೆ ಕರೆತರುವ ಪ್ರಕ್ರಿಯೆ ಕುರಿತು ಹೆಚ್ಚಿನ ವಿವರಗಳು ಲಭ್ಯವಾಗಬೇಕಿವೆ. ಭಾರತದಲ್ಲಿ ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ವಿಚಾರಣೆಗೆ ಹಾಜರುಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ. ಹ–ರಿಯಾಣದ ರೋಹ್ಟಕ್ ಜಿಲ್ಲೆಯ ರಿಟೋಲಿ ಗ್ರಾಮದ ನಿವಾಸಿಯಾದ ಹಿಮಾಂಶು ಭಾವು, ಹಿಮಾಂಶು ರಿಟೋಲಿ ಎಂಬ ಹೆಸರಿನಿಂದಲೂ ಪರಿಚಿತನಾಗಿದ್ದಾನೆ.ಕೊಲೆ, ಕೊಲೆಯತ್ನ ಮತ್ತು ಸುಲಿಗೆ ಆರೋಪಗಳಿಗೆ ಸಂಬಂಧಿಸಿದಂತೆ ಹರಿಯಾಣವೊಂದರಲ್ಲೇ ಆತನ ವಿರುದ್ಧ ಸುಮಾರು 50 ಪ್ರಕರಣಗಳು ದಾಖಲಾಗಿವೆ ಎಂದು ವರದಿಯಾಗಿದೆ. ದೆಹಲಿ ಪೊಲೀಸರು, ಹರಿಯಾಣ ಪೊಲೀಸರು ಹಾಗೂ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕೂಡ ಆತನ ವಿರುದ್ಧ ಪ್ರಕರಣಗಳನ್ನು ದಾಖಲಿಸಿವೆ ಎಂದು ಮೂಲಗಳು ತಿಳಿಸಿವೆ.ಭಾರತದಿಂದ ವಿದೇಶಕ್ಕೆ ತೆರಳಿದ್ದ ಭಾವು ಮೊದಲು ಪೋರ್ಚುಗಲ್‌ಗೆ ಹೋಗಿ ಬಳಿಕ ಅಮೆರಿಕಕ್ಕೆ ತೆರಳಿದ್ದಾನೆ ಎಂದು ವರದಿಯಾಗಿದೆ. 2023ರಲ್ಲಿ ಆತನ ವಿರುದ್ಧ ಲುಕ್‌ಔಟ್ ಸರ್ಕ್ಯುಲರ್ ಹೊರಡಿಸಲಾಗಿದ್ದು, ಅದೇ ವರ್ಷ ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸಿತ್ತು ಎಂದು ವರದಿಗಳು ತಿಳಿಸಿವೆ.

**25ಕ್ಕೂ ಹೆಚ್ಚು ಪ್ರಕರಣಗಳು:**

ಹರಿಯಾಣದ ಪಲ್ವಾಲ್ ಜಿಲ್ಲೆಯ ಫರೀದ್‌ಪುರ ಗ್ರಾಮದ ನಿವಾಸಿಯಾದ ನೀರಜ್ ಫರೀದ್‌ಪುರಿಯಾ ವಿರುದ್ಧ ದೆಹಲಿ, ಹರಿಯಾಣ ಮತ್ತು ಪಂಜಾಬ್‌ನಲ್ಲಿ 25ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ತನಿಖಾ ಸಂಸ್ಥೆಗಳ ಮೂಲಗಳನ್ನು ಉಲ್ಲೇಖಿಸಿ ವರದಿಯಾಗಿದೆ. ಕಾಂಗ್ರೆಸ್ ನಾಯಕ ವಿಕಾಸ್ ಚೌಧರಿ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಬಳಿಕ ನೀರಜ್ ಹೆಸರು ಪ್ರಮುಖವಾಗಿ ಮುನ್ನೆಲೆಗೆ ಬಂದಿತ್ತು. ಫರಿದಾಬಾದ್‌ನ ಬಿಜೆಪಿ ನಾಯಕ ವಿನೋದ್ ಭಾಟಿ ಅವರ ಕಚೇರಿಯಲ್ಲಿ ಸುಲಿಗೆಗಾಗಿ ಬೆದರಿಕೆ ಹಾಕುವ ಉದ್ದೇಶದಿಂದ ಗುಂಡಿನ ದಾಳಿ ನಡೆಸಿದ ಆರೋಪವೂ ಆತನ ಮೇಲಿದೆ. ಎಲ್ವಿಶ್ ಯಾದವ್ ಅವರ ಮನೆಯ ಹೊರಗೆ ನಡೆದ ಗುಂಡಿನ ದಾಳಿ ಪ್ರಕರಣದಲ್ಲೂ ನೀರಜ್ ಹೆಸರು ಕೇಳಿಬಂದಿತ್ತು. ಈ ಪ್ರಕರಣಗಳಲ್ಲಿ ಆತನ ವಿರುದ್ಧದ ಆರೋಪಗಳ ಕುರಿತು ಕಾನೂನು ಪ್ರಕ್ರಿಯೆಗಳು ಮುಂದುವ–ರಿಯಬೇಕಿವೆ.

**ಗ್ಯಾಂಗ್‌ಗಳ ನಡುವಿನ ಪೈಪೋಟಿ:** ಹಿಮಾಂಶು ಭಾವು, ನೀರಜ್ ಬವಾನಾ ಮತ್ತು ಬಂಬಿಹಾ ಗ್ಯಾಂಗ್‌ಗಳೊಂದಿಗೆ ಸಂಪರ್ಕ ಹೊಂದಿದ್ದಾನೆ ಎಂದು ವರದಿಯಾಗಿದೆ. ಲಾರೆನ್ಸ್ ಬಿಷ್ಣೋಯ್ ಮತ್ತು ಗೋಲ್ಡಿ ಬ್ರಾರ್‌ಗೆ ಸಂಬಂಧಿಸಿದ ಗ್ಯಾಂಗ್‌ಗಳೊಂದಿಗೆ ಭಾವು ಗ್ಯಾಂಗ್‌ಗೆ ಪೈಪೋಟಿ ಇದೆ ಎಂಬ ಮಾಹಿತಿಯೂ ವರದಿಗಳಲ್ಲಿದೆ. ವಿದೇಶದಲ್ಲಿ ನೆಲೆಸಿದ್ದರೂ ಭಾರತದಲ್ಲಿನ ತನ್ನ ಗ್ಯಾಂಗ್‌ನ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದ ಎಂಬ ಆರೋಪ ಭಾವು ವಿರುದ್ಧವಿದೆ. ಈ ಹಿನ್ನೆಲೆಯಲ್ಲಿ ಆತನನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಅಂತರರಾಷ್ಟ್ರೀಯ ಸಹಕಾರ ಮಹತ್ವ ಪಡೆದಿದೆ ಎಂದು ಹೇಳಲಾಗಿದೆ. ಹ–ರಿಯಾಣ ಎಸ್‌ಟಿಎಫ್ ನೀಡಿದ ಮಾಹಿತಿಯ ಮೇರೆಗೆ ಎಫ್‌ಬಿಐ ಇಬ್ಬರನ್ನೂ ಬಂಧಿಸಿದೆ ಎಂಬುದು ಈ ಪ್ರಕರಣದ ಪ್ರಮುಖ ಬೆಳವಣಿಗೆಯಾಗಿದೆ. ಆದರೆ ಬಂಧನದ ನಂತರ ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ, ಅಮೆರಿಕದಲ್ಲಿ ನಡೆಯಬೇಕಿರುವ ಕಾನೂನು ಕ್ರಮಗಳು ಹಾಗೂ ಭಾರತದಲ್ಲಿನ ಪ್ರಕರಣಗಳಿಗೆ ಸಂಬಂಧಿಸಿದ ಮುಂದಿನ ಬೆಳವಣಿಗೆಗಳ ಕು–ರಿತು ಅಧಿಕೃತ ವಿವರಗಳು ನಿರೀಕ್ಷೆಯಲ್ಲಿವೆ.

# ಕಾವೇರಿ ವಿವಾದ : ಕರ್ನಾಟಕದ ವಾದಕ್ಕೆ ಮನ್ನಣೆ, 15 ದಿನ 3000 ಕ್ಯೂಸೆಕ್ ನೀರು ಹರಿಸಲು ಆದೇಶ

ಬೆಂಗಳೂರು: ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ನಿನ್ನೆ ನಡೆದ 145ನೇ ಸಿಡಬ್ಲ್ಯುಆರ್‌ಸಿ ಮತ್ತು 60ನೇ ಸಿಡಬ್ಲ್ಯುಎಂಎ ಸಭೆಯಲ್ಲಿ ಮತ್ತೊಮ್ಮೆ ಕರ್ನಾಟಕದ ವಾದಕ್ಕೆ ಮನ್ನಣೆ ಸಿಕ್ಕಿದೆ. ತಮಿಳುನಾಡು 13.829 ಟಿಎಂಸಿ ಬಾಕಿ ಸೇರಿ ಮುಂದಿನ 15 ದಿನಗಳಿಗೆ 18.402 ಟಿಎಂಸಿ ಅಡಿ, ಅಂದರೆ ದಿನಕ್ಕೆ 14,236 ಕ್ಯೂಸೆಕ್ ನೀರು ಬಿಡಬೇಕು ಎಂದು ಒತ್ತಾಯಿಸಿತ್ತು. ಆದರೆ, ಸಿಡಬ್ಲ್ಯುಆರ್‌ಸಿ ಕೇವಲ ದಿನಕ್ಕೆ 3,000 ಕ್ಯೂಸೆಕ್ (3.88 ಟಿಎಂಸಿ) ನೀರನ್ನು ಇಂದು ಬೆಳಿಗ್ಗೆ 8 ಗಂಟೆಯಿಂದ ಮುಂದಿನ 15 ದಿನಗಳ ಕಾಲ ಬಿಳಿಗುಂಡ್ಲು ಬಳಿ ಹ–ರಿಸುವಂತೆ ಆದೇಶಿಸಿದೆ. ಸಿಡಬ್ಲ್ಯುಎಂಎ ಈ ಆದೇಶವನ್ನು ಎತ್ತಿಹಿಡಿದಿದೆ.

ಕರ್ನಾಟಕದಲ್ಲಿ ತೀವ್ರ ಬರ ಪರಿಸ್ಥಿತಿ ಇದ್ದು, ಕಾವೇರಿ ಜಲಾನಯನ ಭಾಗದ ನಮ್ಮ ನಾಲ್ಕು ಜಲಾಶಯಗಳಿಗೆ 30 ವರ್ಷಗಳ ಸರಾಸರಿ 273.865 ಟಿಎಂಸಿ ಒಳಹರಿವು ಬರಬೇಕಿತ್ತು. ಆದರೆ, ಈ ವರ್ಷ ಬಂದಿರುವುದು ಕೇವಲ 122.293 ಟಿಎಂಸಿ. ಅಂದರೆ ಶೇ.55.35ರಷ್ಟು ಕೊರತೆಯಿದೆ.

**ಆದೇಶಕ್ಕಿಂತ ಹೆಚ್ಚು ನೀರು ಬಿಟ್ಟಿದ್ದೇವೆ:**

ಜುಲೈ 29ರಿಂದ ಅಕ್ಟೋಬರ್ 22ರವರೆಗೆ 45.231 ಟಿಎಂಸಿ ನೀರು ಬಿಡಲು ಸೂಚಿಸಿದ್ದರೆ, ಕರ್ನಾಟಕ 47.092 ಟಿಎಂಸಿ ನೀರು ಬಿಟ್ಟಿದೆ. ಅಂದರೆ, 1.861 ಟಿಎಂಸಿ ಹೆಚ್ಚುವರಿ ನೀರು ಹರಿಸಲಾಗಿದೆ. ಹೀಗಾಗಿ, ಬಾಕಿ ನೀರು ಬಿಡುವ ಪ್ರಶ್ನೆಯೇ ಇಲ್ಲ ಎಂದು ಕರ್ನಾಟಕ ಸ್ಪಷ್ಟಪಡಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

**ಜಲಾಶಯಗಳಲ್ಲಿ ನೀರೇ ಇಲ್ಲ:**

ಅಕ್ಟೋಬರ್ 22ರಂದು ನಮ್ಮ ಜಲಾಶಯಗಳಲ್ಲಿ ಕೇವಲ 46.510 ಟಿಎಂಸಿ ನೀರಿತ್ತು. ಒಟ್ಟು ಲಭ್ಯತೆ 55 ಟಿಎಂಸಿ ಇದ್ದರೆ, ಕುಡಿಯುವ ನೀರು, ಆವಿಯಾಗುವಿಕೆ ಮತ್ತು ಪರಿಸರ ಹರಿವಿಗೆ 43 ಟಿಎಂಸಿ ಬೇಕು. ಉಳಿಯುವುದು ಕೇವಲ 12 ಟಿಎಂಸಿ ಮಾತ್ರ. ರಾಜ್ಯದ 240 ತಾಲ್ಲೂಕುಗಳಲ್ಲಿ 226 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಅದರಲ್ಲಿ ಕಾವೇರಿ ಜಲಾನಯನ ಪ್ರದೇಶದ 56 ತಾಲ್ಲೂಕುಗಳ ಪೈಕಿ 55 ತಾಲ್ಲೂಕುಗಳು ಬರಪೀಡಿತವಾಗಿವೆ. ಒಂದು ಬೆಳೆಯನ್ನೂ ಬೆಳೆಯಲು ಆಗದೆ ಸಣ್ಣ ಮತ್ತು ಅತಿಸಣ್ಣ ರೈತರು ಸಂಕಷ್ಟದಲ್ಲಿದ್ದಾರೆ ಎಂದು ಕರ್ನಾಟಕ ವಾದಿಸಿದೆ.




**ತಮಿಳುನಾಡಿನಲ್ಲಿ ಮಳೆಯಾಗಿದೆ:** ತಮಿಳುನಾಡಿನ ಮೆಟ್ಟೂರು, ಭವಾನಿ ಮತ್ತು ಅಮರಾವತಿ ಜಲಾಶಯಗಳಲ್ಲಿ 29.377 ಟಿಎಂಸಿ ನೀರಿದೆ. ಅಕ್ಟೋಬರ್ 1ರಿಂದ 21ರವರೆಗೆ ಅಲ್ಲಿನ 13 ಜಿಲ್ಲೆಗಳಲ್ಲಿ ವಾಡಿಕೆಗಿಂತ ಶೇ.112ರಷ್ಟು ಹೆಚ್ಚು ಮಳೆಯಾಗಿದೆ. ಈಶಾನ್ಯ ಮುಂಗಾರು ಕೂಡ ತಮಿಳುನಾಡಿಗೆ ಅನುಕೂಲವಾಗಲಿದೆ ಎಂದು ಕರ್ನಾಟಕ ದಾಖಲೆಗಳನ್ನು ಸಲ್ಲಿಸಿದೆ. **ತಮಿಳುನಾಡಿನ ವಾದ:** ಮೆಟ್ಟೂರು ಜಲಾಶಯದಲ್ಲಿ 20.887 ಟಿಎಂಸಿ ಮಾತ್ರ ನೀರಿದ್ದು, ಡೆಲ್ಟಾ ಭಾಗದ ರೈತರು ಸಂಕಷ್ಟದಲ್ಲಿದ್ದಾರೆ. ಪ್ರೊ–ರಾಟಾ ಲೆಕ್ಕದಲ್ಲಿ 13.829 ಟಿಎಂಸಿ ನೀರು ಬಾಕಿಯಿದ್ದು, ಅದನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ತಮಿಳುನಾಡು ಒತ್ತಾಯಿಸಿತ್ತು. ಎರಡೂ ರಾಜ್ಯಗಳ ವಾದಗಳನ್ನು ಆಲಿಸಿದ ಸಿಡಬ್ಲ್ಯುಆರ್‌ಸಿ, ಕಳೆದ ಬಾರಿಯಂತೆ ಈ ಬಾರಿಯೂ ಕೇವಲ 3,000 ಕ್ಯೂಸೆಕ್ ನೀರು ಬಿಡುವಂತೆ ಆದೇಶಿಸಿದೆ ಎಂದು ತಿಳಿಸಲಾಗಿದೆ.

# ರಾಜ್ಯದಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆಗೆ 400 ಎಕರೆ ಭೂಮಿ

ಬೆಂಗಳೂರು: ರಾಜ್ಯದಲ್ಲಿ ಬೃಹತ್ ಕೈಗಾ–ರಿಕೆಗಳ ಸ್ಥಾಪನೆಗೆ ಸುಮಾರು 400 ಎಕರೆ ಭೂಮಿ ಒದಗಿಸಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ನಕ್ಷೆಗಳನ್ನು ನೋಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆ ಆಟೊಮೋಟಿವ್ ರೀಸರ್ಚ್ ಅಸೋಷಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ವತಿಯಿಂದ ನಿರ್ಮಾಣ ಮತ್ತು ಮೂಲ ಸೌಕರ್ಯಗಳ ಉಪಕರಣ ಪರೀಕ್ಷಾ ಕೇಂದ್ರ ಸ್ಥಾಪನೆಗೆ 100 ಎಕರೆ ಭೂಮಿಯನ್ನು ಕೇಳಲಾಗಿತ್ತು. ಈ ಉದ್ಯಮದಿಂದ ಹೆಚ್ಚಿನ ಉದ್ಯೋಗವಕಾಶಗಳು ಸೃಷ್ಟಿಯಾಗುವುದಿಲ್ಲ ಎಂಬ ಕಾರಣಕ್ಕೆ ತಾವು ಸಲಹೆ ನೀಡಿದ್ದು, 400 ನಿಂದ 500 ಎಕರೆ ಜಾಗವನ್ನು ಮೀಸಲಿಟ್ಟರೆ, ಬೇರೆ ಬೇರೆ ಕೈಗಾ–ರಿಕೆಗಳು ಅಲ್ಲಿ ಸ್ಥಾಪನೆಯಾಗಲು ಸಾಧ್ಯ ಎಂಬ ಚರ್ಚೆಗಳಿವೆ. ಅದಕ್ಕಾಗಿ ಬೇರೆ ಬೇರೆ ಸ್ಥಳಗಳ ಪರಿಶೀಲನೆ ನಡೆಯುತ್ತಿದೆ ಎಂದರು. ಮುಖ್ಯಮಂತ್ರಿಯವರು ಒಂದು ಜಾಗವನ್ನು ಸಲಹೆ ಮಾಡಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರ್‌ಸ್ವಾಮಿಯವರು ತಮೊಂದಿಗೆ ಮಾತನಾಡಿದ್ದಾರೆ ಎಂದರು. ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾರೋಹಳ್ಳಿ ಜಾಗವನ್ನು ಸಲಹೆ ಮಾಡಿದ್ದರು. ಅದರ ಪರಿಶೀಲನಾ ವರದಿ ಬಂದಿದೆ. ಉಳಿದಂತೆ ನೆಲಮಂಗಲ ಸೇರಿ ಮೂರು ಸ್ಥಳಗಳು ಪರಿಶೀಲನಾ ಹಂತದಲ್ಲಿವೆ ಎಂದು ಹೇಳಿದರು.



ಶಿವಮೊಗ್ಗ ವಿಮಾನ ನಿಲ್ದಾಣದ ಸುತ್ತಾಮುತ್ತಾ ಗ್ರಾಮೀಣ ಭಾಗದ ಜಾಗವನ್ನು ಕೈಬಿಡುವ ಕುರಿತು ಚರ್ಚೆ ನಡೆಯುತ್ತಿದೆ. ಈ ಮೊದಲು 362 ಎಕರೆ ಜಾಗವನ್ನು ಸ್ವಾಧೀನಪಡಿಸೊಕೊಳ್ಳಲಾಗಿದೆ. ಅದರಲ್ಲಿ ಸುಮಾರು 4 ಎಕರೆ ಗ್ರಾಮೀಣ ಭಾಗಕ್ಕೆ ಸೇರಿದೆ. ಅದನ್ನು ಹೊರತು ಪಡಿಸಿದರೆ, ಉಳಿದ ಯಾವ ಜಾಗವನ್ನು ಡಿನೋಟಿಫೈ ಮಾಡಲು ನಮ ಸರ್ಕಾರ ಸಿದ್ಧ ಇಲ್ಲ. ಮುಖ್ಯಮಂತ್ರಿಯವರು ಡಿ ನೋಟಿಫಿಕೇಷನ್ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದಾರೆ ಎಂದು ಹೇಳಿದರು. ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ 2027ರಲ್ಲಿ ನಡೆಯಲಿದೆ. ಈಗಾಗಲೇ ಜಪಾನ್, ಕೊ–ರಿಯಾಗೆ ತೆರಳಿ ಅಲ್ಲಿನ ಉದ್ಯಮಿಗಳನ್ನು ಆಹ್ವಾನಿಸಲಾಗಿದೆ. ಅಮೆರಿಕಾ ಪ್ರವಾಸ ಮಾಡಬೇಕಿತ್ತು. ಆಡಳಿತಾತಕ ಕೆಲಸಗಳು ಬಾಕಿ ಉಳಿಯುತ್ತವೆ ಎಂಬ ಕಾರಣಕ್ಕಾಗಿ ಪ್ರವಾಸವನ್ನು ಮುಂದೂಡಿದ್ದೇನೆ ಎಂದು ಹೇಳಿದರು.

ದೇಶದಲ್ಲಿ ಮುಂಬೈ–ದೆಹಲಿಯಲ್ಲಿ ಈಗಾಗಲೇ ರೋಡ್ ಶೋ ನಡೆಸಲಾಗಿದೆ. ಗುಜರಾತ್ ಮತ್ತು ಪಶ್ಚಿಮ ಬಂಗಾಲದಲ್ಲಿ ರೋಡ್‌ಶೋ ಬಾಕಿ ಇದೆ ಎಂದು ಹೇಳಿದರು.ನವೆಂಬರ್ 1ರಂದು ದೆಹಲಿಯಲ್ಲಿ ಎಸ್‌ಐಆರ್ ವಿರುದ್ಧ ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸಲು ತಮಗೆ ಸಾಧ್ಯವಾಗುತ್ತಿಲ್ಲ. ಅಂದು ಕನ್ನಡ ರಾಜ್ಯೋತ್ಸವ, ಕಾರ್ಯಕ್ರಮಲ್ಲಿ ಭಾಗವಹಿಸುತ್ತಿದ್ದೇನೆ ಎಂದು ತಿಳಿಸಿದರು.

ಸ್ಟಿಂಗ್ ಆಪರೇಷನ್ ಬಗ್ಗೆ ತಾವು ಯಾವುದೇ ಹೇಳಿಕೆ ನೀಡುವುದಿಲ್ಲ. ಪ್ರಕರಣ ತನಿಖೆ ಹಂತದಲ್ಲಿದೆ. ಈ ಸಂದರ್ಭದಲ್ಲಿ ತಾವು ಮಾತನಾಡಲು ಬಯಸುವುದಿಲ್ಲ ಎಂದು ತಿಳಿಸಿದರು. ವಿಜಯಪುರ ಜಿಲ್ಲೆಯಲ್ಲಿ ಶಾಸಕರು ಹಾಗೂ ತಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಎಲ್ಲರೂ ಶಾಂತಿಯಿಂದಿದ್ದಾರೆ. ನಾನೂ ಕೂಡ ಶಾಂತಿಯಿಂದ ಇದ್ದೇನೆ ಎಂದು ಹೇಳಿದರು.

# ಕನ್ನಡ ನಾಡು, ನುಡಿ, ನೆಲ, ಜಲ ಮತ್ತು ಸಂಸ್ಕೃತಿಯ ರಕ್ಷಣೆಯೇ ಸಂಗಮೇಶ ಎನ್ ಜವಾದಿ ರವರ ಬದುಕಿನ ಧ್ಯೇಯ

ಒಬ್ಬ ವ್ಯಕ್ತಿಯ ಬದುಕು ಕೇವಲ ತನ್ನ ವೈಯಕ್ತಿಕ ಸಾಧನೆ, ಕುಟುಂಬದ ಏಳಿಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸೀಮಿತವಾದರೆ ಆ ಬದುಕಿಗೆ ಒಂದು ನಿರ್ದಿಷ್ಟ ವ್ಯಾಪ್ತಿ ಇರುತ್ತದೆ. ಆದರೆ ತನ್ನ ಬದುಕಿನ ಉದ್ದೇಶವನ್ನು ಸಮಾಜದ ಒಳಿತಿನೊಂದಿಗೆ ಬೆಸೆದುಕೊಂಡು, ನಾಡಿನ ನೆಲ, ಜಲ, ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ನಿರಂತರವಾಗಿ ಶ್ರಮಿಸುವ ವ್ಯಕ್ತಿಯ ಬದುಕು ವಿಶಾಲವಾದ ಅರ್ಥವನ್ನು ಪಡೆದುಕೊಳ್ಳುತ್ತದೆ. ಅಂತಹ ವ್ಯಕ್ತಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿಗಳಿಗಿಂತ ಸಾರ್ವಜನಿಕ ಹಿತಾಸಕ್ತಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಪ್ರಶಸ್ತಿ, ಪುರಸ್ಕಾರ, ಅಧಿಕಾರ ಅಥವಾ ಪ್ರತಿಫಲದ ನಿರೀಕ್ಷೆಯಿಲ್ಲದೆ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಇಂತಹ ವ್ಯಕ್ತಿಗಳ ಸೇವೆ ನಿಜಕ್ಕೂ ಮೌಲ್ಯಯುತವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ನಾಡು, ನುಡಿ, ನೆಲ, ಜಲ ಮತ್ತು ಸಂಸ್ಕೃತಿಯ ಬಗ್ಗೆ ಕಾಳಜಿ ಹೊಂದಿ ಜನಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಂಗಮೇಶ ಎನ್. ಜವಾದಿ ಅವರ ಸಾಮಾಜಿಕ ಬದ್ಧತೆಯನ್ನು ಚರ್ಚಿಸುವುದು ಪ್ರಸ್ತುತವಾಗಿದೆ.

ಕನ್ನಡವೆಂಬುದು ಕೇವಲ ಸಂವಹನದ ಭಾಷೆಯಲ್ಲ; ಅದು ಕನ್ನಡಿಗರ ಬದುಕಿನ ಉಸಿರು, ಭಾವನೆಗಳ ಅಭಿವ್ಯಕ್ತಿ, ಐತಿಹಾಸಿಕ ಪರಂಪರೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಪ್ರತೀಕವಾಗಿದೆ. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಸಾವಿರಾರು ವರ್ಷಗಳ ಸಾಹಿತ್ಯ ಪರಂಪರೆ, ವಚನಕಾರರ ವೈಚಾರಿಕ ಕ್ರಾಂತಿ, ದಾಸ ಸಾಹಿತ್ಯದ ಭಕ್ತಿಭಾವ, ಜನಪದ ಸಂಸ್ಕೃತಿಯ ಜೀವಂತಿಕೆ ಮತ್ತು ಆಧುನಿಕ ಸಾಹಿತ್ಯದ ಸಾಮಾಜಿಕ ಪ್ರಜ್ಞೆ ಮಹತ್ವದ ಪಾತ್ರ ವಹಿಸಿವೆ. ಇಂತಹ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಮತ್ತು ಕನ್ನಡದ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯಾಗಿದೆ. ಕನ್ನಡ ಭಾಷೆಯ ರಕ್ಷಣೆ ಎಂದರೆ ಅನ್ಯ ಭಾಷೆಗಳನ್ನು ವಿರೋಧಿಸುವುದಲ್ಲ. ಬದಲಾಗಿ ಕನ್ನಡಿಗರು ತಮ್ಮ ಮಾತೃಭಾಷೆಯನ್ನು ಪ್ರೀತಿಸುವಂತೆ, ಆಡಳಿತ, ಶಿಕ್ಷಣ, ಉದ್ಯೋಗ, ವ್ಯಾಪಾರ ಮತ್ತು ಸಾರ್ವಜನಿಕ ಜೀವನದಲ್ಲಿ ಕನ್ನಡಕ್ಕೆ ಸೂಕ್ತ ಸ್ಥಾನಮಾನ ದೊರೆಯುವಂತೆ ಪ್ರಯತ್ನಿಸುವುದಾಗಿದೆ. ಭಾಷೆಗಳ ನಡುವಿನ ಪರಸ್ಪರ ಗೌರವವು ಪ್ರಜಾಪ್ರಭುತ್ವದ ಸೌಂದರ್ಯವಾಗಿದೆ. ಆದರೆ ಯಾವುದೇ ಭಾಷೆಯ ಅಸ್ತಿತ್ವ, ಬಳಕೆ ಮತ್ತು ಬೆಳವಣಿಗೆಗೆ ಧಕ್ಕೆಯಾಗುವ ಪರಿಸ್ಥಿತಿ ಎದುರಾದಾಗ ಪ್ರಜಾಸತ್ತಾತ್ಮಕವಾಗಿ ಧ್ವನಿ ಎತ್ತುವುದು ಅಗತ್ಯವಾಗುತ್ತದೆ. ಭಾಷಾ ಹಕ್ಕುಗಳ ರಕ್ಷಣೆಯು ಸಾಂಸ್ಕೃತಿಕ ಸ್ವಾಭಿಮಾನದ ಜೊತೆಗೆ ಸಾಮಾಜಿಕ ನ್ಯಾಯದ ಪ್ರಶ್ನೆಯೂ ಆಗಿದೆ. ಕನ್ನಡ ಸಾಹಿತ್ಯದ ಬೆಳವಣಿಗೆಯೂ ಭಾಷೆಯ ಉಳಿವಿಗೆ ಅವಿಭಾಜ್ಯವಾಗಿ ಸಂಬಂಧಿಸಿದೆ. ಸಾಹಿತ್ಯವು ಸಮಾಜದ ಚಿಂತನೆಗಳನ್ನು ರೂಪಿಸುತ್ತದೆ, ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ ಮತ್ತು ಅನ್ಯಾಯದ ವಿರುದ್ಧ ಪ್ರಶ್ನಿಸುವ ಮನೋಭಾವವನ್ನು ಮೂಡಿಸುತ್ತದೆ. ವಚನಕಾರರು ತಮ್ಮ ಕಾಲದ ಸಾಮಾಜಿಕ ಅಸಮಾನತೆಗಳನ್ನು ಪ್ರಶ್ನಿಸಿ ಸಮಾನತೆ, ಕಾಯಕ, ದಾಸೋಹ ಮತ್ತು ಮಾನವೀಯತೆಯ ಸಂದೇಶವನ್ನು ಸಾರಿದರು. ಬಸವಣ್ಣನವರ ವಚನಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತವೆ. ಸಾಹಿತ್ಯದ ಓದು, ಬರವಣಿಗೆ, ಚರ್ಚೆ ಮತ್ತು ಪ್ರಕಟಣೆಗೆ ಪ್ರೋತ್ಸಾಹ ನೀಡುವುದು ಕನ್ನಡದ ಬೌದ್ಧಿಕ ಪರಂಪರೆಯನ್ನು ಉಳಿಸುವ ಮಹತ್ವದ ಕಾರ್ಯವಾಗಿದೆ. ಸಂಗಮೇಶ ಎನ್. ಜವಾದಿ ಅವರು ಬರಹಗಾರರಾಗಿ ಹಾಗೂ ಜನಪರ ಚಿಂತನೆಯುಳ್ಳ ವ್ಯಕ್ತಿಯಾಗಿ ಕನ್ನಡ ಸಾಹಿತ್ಯ ಮತ್ತು ವೈಚಾರಿಕ ಬರವಣಿಗೆಯೊಂದಿಗೆ ತೊಡಗಿಸಿಕೊಂಡಿರುವುದು ಅವರ ಬಹುಮುಖ ಆಸಕ್ತಿಯನ್ನು ಪ್ರತಿಬಿಂಬಿಸುತ್ತದೆ. ಸಮಾಜದ ಸಮಸ್ಯೆಗಳನ್ನು ಬರವಣಿಗೆಯ ಮೂಲಕ ಜನರ ಮುಂದಿಡುವುದು, ಭಾಷೆ ಮತ್ತು ಸಂಸ್ಕೃತಿಯ ಮಹತ್ವವನ್ನು ಸಾರುವುದು ಹಾಗೂ ಜನರಲ್ಲಿ ಜಾಗೃತಿ ಮೂಡಿಸುವುದು ಲೇಖನಿಯ ಸಕಾರಾತ್ಮಕ ಶಕ್ತಿಯಾಗಿದೆ. ಲೇಖಕನ ಬರಹವು ಕೇವಲ ಓದುಗರ ಮನರಂಜನೆಗೆ ಸೀಮಿತವಾಗದೆ, ಸಮಾಜದ ವಾಸ್ತವಗಳನ್ನು ಪರಿಚಯಿಸಿ ಜನರನ್ನು ಚಿಂತನೆಗೆ ಹಚ್ಚಿದಾಗ ಅದರ ಸಾಮಾಜಿಕ ಮೌಲ್ಯ ಹೆಚ್ಚುತ್ತದೆ.

ಕನ್ನಡಿಗರ ಪಾಲಿಗೆ ನೆಲದ ಪ್ರಶ್ನೆಯೂ ಅತ್ಯಂತ ಮಹತ್ವದ್ದಾಗಿದೆ. ಕನ್ನಡ ನಾಡಿನ ಭೌಗೋಳಿಕ ಅಸ್ತಿತ್ವ, ಗಡಿಭಾಗದ ಜನರ ಹಕ್ಕುಗಳು, ಸ್ಥಳೀಯ ಜನಜೀವನ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಕಾಪಾಡುವುದು ನಾಡಿನ ಮೇಲಿನ ಪ್ರೀತಿಯ ಅಭಿವ್ಯಕ್ತಿಯಾಗಿದೆ. ವಿಶೇಷವಾಗಿ ಗಡಿಭಾಗಗಳಲ್ಲಿ ವಾಸಿಸುವ ಕನ್ನಡಿಗರು ಭಾಷೆ, ಶಿಕ್ಷಣ, ಆಡಳಿತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಹಲವು ಸವಾಲುಗಳನ್ನು ಎದುರಿಸಬಹುದು. ಇಂತಹ ಸಂದರ್ಭಗಳಲ್ಲಿ ಅವರ ಸಮಸ್ಯೆಗಳನ್ನು ಗುರುತಿಸಿ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಆಡಳಿತ ವ್ಯವಸ್ಥೆಯ ಗಮನಕ್ಕೆ ತರುವುದು ಅಗತ್ಯ. ಗಡಿಭಾಗದ ಜನರ ಹಕ್ಕುಗಳ ರಕ್ಷಣೆ ಎಂದರೆ ಕೇವಲ ಭಾವನಾತ್ಮಕ ಘೋಷಣೆಗಳನ್ನು ಕೂಗುವುದಲ್ಲ. ಅಲ್ಲಿ ವಾಸಿಸುವ ಜನರಿಗೆ ಕನ್ನಡದಲ್ಲಿ ಶಿಕ್ಷಣ ಪಡೆಯುವ ಅವಕಾಶ, ಕನ್ನಡದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ, ಸರ್ಕಾರಿ ಸೇವೆಗಳಲ್ಲಿ ಭಾಷಾ ಹಕ್ಕುಗಳ ಗೌರವ ಮತ್ತು ಸಮಾನ ನಾಗರಿಕ ಸೌಲಭ್ಯಗಳು ದೊರೆಯುವಂತೆ ಪ್ರಯತ್ನಿಸುವುದಾಗಿದೆ. ಗಡಿಭಾಗದ ಜನರ ಬದುಕು, ಭಾಷೆ ಮತ್ತು ಸಂಸ್ಕೃತಿಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಶಾಂತಿಯುತ ಹೋರಾಟ, ಕಾನೂನುಬದ್ಧ ಕ್ರಮ ಮತ್ತು ಸಂವಾದದ ಮಾರ್ಗಗಳನ್ನು ಅನುಸರಿಸಬೇಕು. ಕನ್ನಡದ ಹಿತಾಸಕ್ತಿಯನ್ನು ಕಾಪಾಡುವ ಹೋರಾಟವು ಇತರ ಭಾಷಿಕರ ಬಗ್ಗೆ ದ್ವೇಷ ಬೆಳೆಸದೆ, ಪರಸ್ಪರ ಗೌರವ ಮತ್ತು ಸಹಬಾಳ್ವೆಯನ್ನು ಬಲಪಡಿಸುವಂತಿರಬೇಕು. ನೆಲದಷ್ಟೇ ಜಲವೂ ನಮ್ಮ ಬದುಕಿನ ಮೂಲಾಧಾರವಾಗಿದೆ. ನೀರಿಲ್ಲದೆ ಕೃಷಿ ಸಾಧ್ಯವಿಲ್ಲ; ಕೃಷಿಯಿಲ್ಲದೆ ಆಹಾರ ಭದ್ರತೆ ಸಾಧ್ಯವಿಲ್ಲ; ಜಲಮೂಲಗಳಿಲ್ಲದೆ ಜೀವವೈವಿಧ್ಯ ಮತ್ತು ಪರಿಸರ ಸಮತೋಲನ ಉಳಿಯುವುದಿಲ್ಲ. ಕರ್ನಾಟಕದ ಅನೇಕ ಪ್ರದೇಶಗಳು ಬರಗಾಲ, ಅಂತರ್ಜಲ ಕುಸಿತ ಮತ್ತು ನೀರಿನ ಕೊರತೆಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಕಲ್ಯಾಣ ಕರ್ನಾಟಕದಂತಹ ಪ್ರದೇಶಗಳಲ್ಲಿ ಕೆರೆಕಟ್ಟೆಗಳ ಸಂರಕ್ಷಣೆ, ಮಳೆನೀರು ಸಂಗ್ರಹ, ಜಲಾನಯನ ಅಭಿವೃದ್ಧಿ, ನದಿಗಳ ಸ್ವಚ್ಛತೆ ಮತ್ತು ನೀರಿನ ಸಮರ್ಪಕ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ನಾಡು-ನುಡಿಯ ರಕ್ಷಣೆಯ ಕುರಿತು ಮಾತನಾಡುವಾಗ ಪ್ರಕೃತಿಯ ರಕ್ಷಣೆಯನ್ನು ಮರೆಯಬಾರದು. ನಮ್ಮ ನೆಲ, ನದಿ, ಕೆರೆ, ಅರಣ್ಯ ಮತ್ತು ಜೀವವೈವಿಧ್ಯವೇ ನಮ್ಮ ಬದುಕಿನ ಆಧಾರವಾಗಿವೆ. ಪರಿಸರ ನಾಶವಾದರೆ ಕೃಷಿ, ಗ್ರಾಮೀಣ ಆರ್ಥಿಕತೆ ಮತ್ತು ಜನರ ಆರೋಗ್ಯದ ಮೇಲೂ ಗಂಭೀರ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಪರಿಸರ ಸಂರಕ್ಷಣೆ, ಮರಗಳ ಬೆಳವಣಿಗೆ, ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ ಮತ್ತು ಜಲಮೂಲಗಳ ರಕ್ಷಣೆಯೂ ನಾಡು ಕಟ್ಟುವ ಕಾರ್ಯದ ಅವಿಭಾಜ್ಯ ಭಾಗಗಳಾಗಿವೆ. ಪರಿಸರವಾದಿಯಾಗಿ ಗುರುತಿಸಿಕೊಳ್ಳುವ ಸಂಗಮೇಶ ಜವಾದಿ ಅವರಂತಹ ವ್ಯಕ್ತಿಗಳಿಗೆ ಈ ಕ್ಷೇತ್ರದಲ್ಲಿ ಜನಜಾಗೃತಿ ಮೂಡಿಸುವ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಅವಕಾಶವಿದೆ. ಸಂಸ್ಕೃತಿ ಎಂಬುದು ಕೇವಲ ಹಬ್ಬ, ಉತ್ಸವ, ವೇಷಭೂಷಣ ಮತ್ತು ಆಚರಣೆಗಳಿಗೆ ಸೀಮಿತವಾದುದಲ್ಲ. ಅದು ಒಂದು ಸಮಾಜದ ಜೀವನಮೌಲ್ಯಗಳು, ಭಾಷೆ, ಕಲೆ, ಸಾಹಿತ್ಯ, ಆಹಾರ ಪದ್ಧತಿ, ಜನಪದ ಸಂಪ್ರದಾಯ ಮತ್ತು ಮಾನವ ಸಂಬಂಧಗಳ ಸಮಗ್ರ ಅಭಿವ್ಯಕ್ತಿಯಾಗಿದೆ. ಕನ್ನಡ ಸಂಸ್ಕೃತಿಯ ಜೀವಾಳವಾಗಿರುವ ಸಮಾನತೆ, ಸಹಬಾಳ್ವೆ, ದಯೆ ಮತ್ತು ಮಾನವೀಯತೆಯಂತಹ ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಮುಖ್ಯ. ನಮ್ಮ ಸಂಸ್ಕೃತಿಯನ್ನು ಪ್ರೀತಿಸುವುದರ ಜೊತೆಗೆ ಇತರರ ಸಂಸ್ಕೃತಿಯನ್ನು ಗೌರವಿಸುವ ಮನೋಭಾವವೂ ಬೆಳೆಬೇಕು. ನಿಜವಾದ ಸಾಂಸ್ಕೃತಿಕ ಅಭಿಮಾನವು ವಿಭಜನೆಯನ್ನು ಸೃಷ್ಟಿಸುವುದಿಲ್ಲ; ಅದು ಜನರ ನಡುವೆ ಪ್ರೀತಿ, ಗೌರವ ಮತ್ತು ಸಹೋದರತ್ವವನ್ನು ಬೆಳೆಸುತ್ತದೆ.

ಜನಪರ ಹೋರಾಟಗಾರನ ಜವಾಬ್ದಾರಿ ಈ ಎಲ್ಲ ಕ್ಷೇತ್ರಗಳಲ್ಲಿಯೂ ಮಹತ್ವದ್ದಾಗಿದೆ. ಜನರ ನ್ಯಾಯಯುತ ಬೇಡಿಕೆಗಳಿಗೆ ಧ್ವನಿಯಾಗುವುದು, ಸಮಸ್ಯೆಗಳನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದು, ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಮತ್ತು ಪರಿಹಾರಕ್ಕಾಗಿ ಸಂಘಟಿತ ಪ್ರಯತ್ನ ನಡೆಸುವುದು ಹೋರಾಟದ ಮುಖ್ಯ ಉದ್ದೇಶವಾಗಿರಬೇಕು. ಹೋರಾಟದ ಯಶಸ್ಸನ್ನು ಕೇವಲ ಪ್ರತಿಭಟನೆಗಳ ಸಂಖ್ಯೆ ಅಥವಾ ಘೋಷಣೆಗಳ ತೀವ್ರತೆಯಿಂದ ಅಳೆಯಲು ಸಾಧ್ಯವಿಲ್ಲ. ಹೋರಾಟದಿಂದ ಜನರ ಬದುಕಿನಲ್ಲಿ ಉಂಟಾಗುವ ಸಕಾರಾತ್ಮಕ ಬದಲಾವಣೆ, ಸಮಸ್ಯೆಗಳಿಗೆ ದೊರೆಯುವ ಪರಿಹಾರ ಮತ್ತು ಸಾರ್ವಜನಿಕರಲ್ಲಿ ಬೆಳೆಯುವ ಜವಾಬ್ದಾರಿಯುತ ಪ್ರಜ್ಞೆಯೇ ಅದರ ನಿಜವಾದ ಸಾಧನೆಯಾಗಿದೆ. ಸಂಗಮೇಶ ಎನ್. ಜವಾದಿ ಅವರು ಕನ್ನಡ ನಾಡು, ನುಡಿ, ನೆಲ, ಜಲ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಜನಪರ ವಿಷಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಮಾಜಮುಖಿ ಚಿಂತನೆಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ವ್ಯಕ್ತಿಯಾಗಿ ಗುರುತಿಸಿಕೊಳ್ಳುತ್ತಾರೆ. ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಯೊಬ್ಬರಿಗೆ ನಿರಂತರ ಪರಿಶ್ರಮ, ಅಧ್ಯಯನ, ತಾಳ್ಮೆ ಮತ್ತು ಜನರೊಂದಿಗೆ ಬೆರೆಯುವ ಗುಣ ಅತ್ಯಗತ್ಯ. ಸಾರ್ವಜನಿಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳ ಕುರಿತು ಬರೆಯುವುದು, ಜನರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಮತ್ತು ನ್ಯಾಯಯುತ ಬೇಡಿಕೆಗಳ ಪರವಾಗಿ ನಿಲ್ಲುವುದು ಸಮಾಜಮುಖಿ ಬದುಕಿನ ಪ್ರಮುಖ ಲಕ್ಷಣಗಳಾಗಿವೆ.

ಇಂತಹ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವವರಿಗೆ ಎಲ್ಲ ಸಂದರ್ಭಗಳಲ್ಲಿಯೂ ತಕ್ಷಣದ ಯಶಸ್ಸು ದೊರೆಯುವುದಿಲ್ಲ. ಕೆಲವೊಮ್ಮೆ ಟೀಕೆಗಳು ಎದುರಾಗಬಹುದು; ಪ್ರಯತ್ನಗಳಿಗೆ ನಿರೀಕ್ಷಿತ ಪ್ರತಿಕ್ರಿಯೆ ಸಿಗದಿರಬಹುದು. ಆದರೂ ಸಾರ್ವಜನಿಕ ಹಿತಾಸಕ್ತಿಯ ಕುರಿತು ಪ್ರಾಮಾಣಿಕ ಬದ್ಧತೆ ಹೊಂದಿರುವವರು ತಮ್ಮ ಕಾರ್ಯವನ್ನು ಮುಂದುವರಿಸುವುದು ಮುಖ್ಯ. ಆದರೆ ಯಾವುದೇ ಹೋರಾಟವು ಸತ್ಯ, ನ್ಯಾಯ, ಕಾನೂನು ಮತ್ತು ಮಾನವೀಯ ಮೌಲ್ಯಗಳ ನೆಲೆಯಲ್ಲಿ ನಡೆಯಬೇಕು. ವೈಯಕ್ತಿಕ ದ್ವೇಷಕ್ಕಿಂತ ಸಾರ್ವಜನಿಕ ಹಿತಾಸಕ್ತಿಗೆ, ಭಾವನಾತ್ಮಕ ಆವೇಶಕ್ಕಿಂತ ವಿವೇಚನೆಗೆ ಮತ್ತು ಸಂಘರ್ಷಕ್ಕಿಂತ ಸಂವಾದಕ್ಕೆ ಆದ್ಯತೆ ನೀಡಿದಾಗ ಹೋರಾಟವು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವುದು ಸಮಾಜಸೇವೆಯ ಅತ್ಯುತ್ತಮ ಆದರ್ಶಗಳಲ್ಲಿ ಒಂದಾಗಿದೆ. ಸೇವೆ ಎಂದರೆ ಪ್ರತಿಯೊಂದು ಕಾರ್ಯಕ್ಕೂ ಪ್ರತಿಯಾಗಿ ಗೌರವ, ಹಣ ಅಥವಾ ಅಧಿಕಾರವನ್ನು ನಿರೀಕ್ಷಿಸುವುದಲ್ಲ. ಸಮಾಜಕ್ಕೆ ಅಗತ್ಯವಿರುವ ಸಂದರ್ಭದಲ್ಲಿ ತನ್ನ ಸಮಯ, ಜ್ಞಾನ, ಶ್ರಮ ಮತ್ತು ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಳ್ಳುವುದೇ ನಿಜವಾದ ಸೇವೆ. ಆದರೆ ಇಂತಹ ಸೇವಾ ಮನೋಭಾವವನ್ನು ಹೊಂದಿರುವವರ ಕಾರ್ಯಗಳನ್ನು ಸಮಾಜವು ಗುರುತಿಸಬೇಕು; ಅವರ ಸಕಾರಾತ್ಮಕ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡಬೇಕು. ವ್ಯಕ್ತಿಯನ್ನು ಹೊಗಳುವುದಕ್ಕಿಂತ ಅವರು ಪ್ರತಿನಿಧಿಸುವ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಇನ್ನೂ ಮುಖ್ಯ.ಒಟ್ಟಿನಲ್ಲಿ, ಕನ್ನಡ ನಾಡು, ನುಡಿ, ನೆಲ, ಜಲ, ಸಾಹಿತ್ಯ ಮತ್ತು ಸಂಸ್ಕೃತಿಯ ರಕ್ಷಣೆ ಎಂಬುದು ಒಬ್ಬ ವ್ಯಕ್ತಿಯ ಅಥವಾ ಒಂದು ಸಂಘಟನೆಯ ಜವಾಬ್ದಾರಿ ಮಾತ್ರವಲ್ಲ; ಅದು ಪ್ರತಿಯೊಬ್ಬ ಕನ್ನಡಿಗನ ಸಾಮೂಹಿಕ ಹೊಣೆಗಾರಿಕೆಯಾಗಿದೆ. ಈ ಹೊಣೆಗಾರಿಕೆಯನ್ನು ಅರಿತು ತಮ್ಮದೇ ಆದ ರೀತಿಯಲ್ಲಿ ಶ್ರಮಿಸುವ ಸಂಗಮೇಶ ಎನ್. ಜವಾದಿ ಅವರಂತಹ ವ್ಯಕ್ತಿಗಳ ಜನಪರ ಚಟುವಟಿಕೆಗಳು ಸಮಾಜದಲ್ಲಿ ಭಾಷಾಭಿಮಾನ, ಪರಿಸರ ಪ್ರಜ್ಞೆ, ಸಾಹಿತ್ಯಾಸಕ್ತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಲು ಪ್ರೇರಣೆಯಾಗಬಲ್ಲವು.

ನಾಡಿನ ಮೇಲಿನ ಪ್ರೀತಿ ಘೋಷಣೆಗಳಲ್ಲಿ ಮಾತ್ರ ವ್ಯಕ್ತವಾಗಬಾರದು; ಅದು ನಮ್ಮ ನಡೆ, ನುಡಿ ಮತ್ತು ಕಾರ್ಯಗಳಲ್ಲಿ ಪ್ರತಿಫಲಿಸಬೇಕು. ಕನ್ನಡವನ್ನು ಪ್ರೀತಿಸೋಣ, ಕನ್ನಡಿಗರ ಹಕ್ಕುಗಳನ್ನು ಗೌರವಿಸೋಣ, ಗಡಿಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸೋಣ, ನೆಲ-ಜಲವನ್ನು ಸಂರಕ್ಷಿಸೋಣ, ಸಾಹಿತ್ಯವನ್ನು ಬೆಳೆಸೋಣ ಮತ್ತು ಸಂಸ್ಕೃತಿಯ ಮಾನವೀಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸೋಣ. ಪ್ರತಿಫಲದ ನಿರೀಕ್ಷೆಯಿಲ್ಲದೆ ಸಮಾಜದ ಒಳಿತಿಗಾಗಿ ದುಡಿಯುವ ಮನೋಭಾವವೇ ನಿಜವಾದ ಜನಸೇವೆಯ ಗುರುತು. ಇಂತಹ ಸೇವಾ ಮನೋಭಾವವು ಇನ್ನಷ್ಟು ಜನರಲ್ಲಿ ಬೆಳೆಯಲಿ; ಕನ್ನಡ ನಾಡು ಸಮಾನತೆ, ಸೌಹಾರ್ದತೆ, ಪರಿಸರ ಸಮೃದ್ಧಿ ಮತ್ತು ಸಾಂಸ್ಕೃತಿಕ ವೈಭವದಿಂದ ಬೆಳಗಲಿ ಎಂಬುದೇ ಆಶಯ.



**ಸಂಗಮೇಶ ಎನ್. ಜವಾದಿ,**
**ಬರಹಗಾರರು, ಪರಿಸರವಾದಿ, ಬೀದರ ಜಿಲ್ಲೆ.**

### ಬಾಗಲವಾಡ ಗ್ರಾಮದ ಗ್ರಾಮ ದೇವತೆ ದಸರಾ ಹಬ್ಬದ ಸಡಗರ ಸಂಭ್ರಮ

# ಭಕ್ತಿ, ಸಂಪ್ರದಾಯ, ಸಂಸ್ಕೃತಿ ಹಾಗೂ ತವರುಮನೆಯ ಸಂತೋಷದ ಅಪೂರ್ವ ಸಂಗಮ

ಗ್ರಾಮ: ಬಾಗಲವಾಡ । ತಾಲೂಕು: ಸಿರವಾರ । ಜಿಲ್ಲೆ: ರಾಯಚೂರು ನಮ್ಮ ನಾಡಿನ ಹಬ್ಬಗಳು ಕೇವಲ ಆಚರಣೆಗಳಲ್ಲ; ಅವು ನಮ್ಮ ಸಂಸ್ಕೃತಿಯ ಪ್ರತಿಬಿಂಬ, ಪರಂಪರೆಯ ಹೆಗ್ಗುರುತು ಹಾಗೂ ಜನಮನಗಳನ್ನು ಬೆಸೆಯುವ ಭಕ್ತಿಯ ಸೇತುವೆಗಳು. ಅಂತಹ ಭಕ್ತಿ, ಸಂಪ್ರದಾಯ ಮತ್ತು ಸಡಗರದ ಅಪೂರ್ವ ಸಂಗಮವೇ ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಬಾಗಲವಾಡ ಗ್ರಾಮದ ಶ್ರೀ ಗ್ರಾಮ ದೇವತೆಯ ದಸರಾ ಮಹೋತ್ಸವ.

ಬಾಗಲವಾಡ ಗ್ರಾಮದ ಜನರ ಪಾಲಿಗೆ ದಸರಾ ಹಬ್ಬವೆಂದರೆ ಅದು ಕೇವಲ ಒಂದು ಹಬ್ಬವಲ್ಲ; ಊರಿನ ಪ್ರತಿಯೊಂದು ಮನೆಯಲ್ಲೂ ಸಂಭ್ರಮದ ಕಳೆ ತುಂಬುವ, ಪ್ರತಿಯೊಂದು ಹೃದಯದಲ್ಲೂ ಭಕ್ತಿಯ ಭಾವನೆ ಮೂಡಿಸುವ, ಊರಿನ ಪ್ರತಿಯೊಂದು ಬೀದಿಯಲ್ಲೂ ಸಂತೋಷದ ಅಲೆ ಎಬ್ಬಿಸುವ ಮಹಾಪರ್ವ.

**ಒಂಬತ್ತು ದಿನಗಳ ಪುರಾಣ ಪ್ರವಚನ ಭಕ್ತಿಯ ಪಾವನ ಪಯಣ**

ದಸರಾ ಹಬ್ಬದ ಆಗಮನದೊಂದಿಗೆ ಬಾಗಲವಾಡ ಗ್ರಾಮದಲ್ಲಿ ಆಧ್ಯಾತ್ಮಿಕ ವಾತಾವರಣ ಮನೆಮಾಡುತ್ತದೆ. ಒಂಬತ್ತು ದಿನಗಳ ಕಾಲ ನಡೆಯುವ ಪುರಾಣ ಪ್ರವಚನಗಳು ಭಕ್ತರ ಮನಸ್ಸಿಗೆ ಶಾಂತಿ, ಸಾಂತ್ವನ ಹಾಗೂ ಧಾರ್ಮಿಕ ಚಿಂತನೆಗಳನ್ನು ನೀಡುತ್ತವೆ. ದೇವಿಯ ಮಹಿಮೆ, ಪುರಾಣಗಳ ಸಾರ, ಧರ್ಮದ ಸಂದೇಶ ಹಾಗೂ ಸಂಸ್ಕೃತಿಯ ಮೌಲ್ಯಗಳು ಜನಮನಗಳಲ್ಲಿ ಭಕ್ತಿಯ ಬೆಳಕನ್ನು ಮೂಡಿಸುತ್ತವೆ. ಒಂಬತ್ತು ದಿನಗಳ ಕಾಲ ದೇವಿಯ ಆರಾಧನೆಯಲ್ಲಿ ತೊಡಗುವ ಗ್ರಾಮಸ್ಥರು, ದೇವಿಯ ಕೃಪೆಗೆ ಪಾತ್ರರಾಗಬೇಕೆಂಬ ಭಕ್ತಿಭಾವದಿಂದ ಹಬ್ಬದ ಪ್ರತಿಯೊಂದು ಕ್ಷಣವನ್ನೂ ಸ್ಮರಣೀಯವಾಗಿಸಿಕೊಳ್ಳುತ್ತಾರೆ. ದೇವಿಯ ನಾಮಸ್ಮರಣೆ, ಪೂಜೆ-ಪುನಸ್ಕಾರಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಇಡೀ ಗ್ರಾಮವನ್ನು ಭಕ್ತಿಯ ಲೋಕಕ್ಕೆ ಕರೆದೊಯ್ಯುತ್ತವೆ.

**ಕುಂಭೋತ್ಸವದ ನಂತರ ದೇವಿಯ ಮೆರವಣಿಗೆ ಕಣ್ಮನ ಸೆಳೆಯುವ ಭವ್ಯ ದೃಶ್ಯ**

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯೇ ಕುಂಭೋತ್ಸವದ ನಂತರ ನಡೆಯುವ ಶ್ರೀ ದೇವಿಯ ಭವ್ಯ ಮೆರವಣಿಗೆ. ಈ ಮೆರವಣಿಗೆಯ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಭಕ್ತರು ಗ್ರಾಮದಲ್ಲಿ ಸೇರುತ್ತಾರೆ. ದೇವಿಯ ದರ್ಶನ ಪಡೆಯಬೇಕೆಂಬ ಹಂಬಲದಿಂದ ದೂರದ ಊರುಗಳಿಂದಲೂ ಭಕ್ತರು ಆಗಮಿಸುತ್ತಾರೆ. ದೇವಿಯ ಮೆರವಣಿಗೆಯ ಸಂದರ್ಭದಲ್ಲಿ ಮೊಳಗುವ ಭಕ್ತಿಗೀತೆಗಳು, ಜೈಕಾರಗಳು, ಸಾಂಪ್ರದಾಯಿಕ ಆಚರಣೆಗಳು ಹಾಗೂ ಜನರ ಹರ್ಷೋದ್ಗಾರಗಳು ಇಡೀ ಗ್ರಾಮವನ್ನು ಭಕ್ತಿಮಯವಾಗಿಸುತ್ತವೆ. ದೇವಿಯ ಪಲ್ಲಕ್ಕಿ ಸಾಗುವ ದಾರಿಯಲ್ಲಿ ಭಕ್ತರ ಕಣ್ಣುಗಳಲ್ಲಿ ಭಕ್ತಿ, ಹೃದಯಗಳಲ್ಲಿ ಸಂತೋಷ, ತುಟಿಗಳಲ್ಲಿ ದೇವಿಯ ನಾಮಸ್ಮರಣೆ ತುಂಬಿರುತ್ತದೆ. ತಾಯಿಯ ದರ್ಶನ ಪಡೆದು, ಕೈಮುಗಿದು ಪ್ರಾರ್ಥಿಸುವ ಪ್ರತಿಯೊಬ್ಬ ಭಕ್ತನ ಮನಸ್ಸಿನಲ್ಲೂ ಒಂದು ವಿಶೇಷವಾದ ನೆಮ್ಮದಿ ಮೂಡುತ್ತದೆ.



ದೇವಿಯ ಮೆರವಣಿಗೆ ಎಂದರೆ ಕೇವಲ ಉತ್ಸವವಲ್ಲ; ಅದು ತಲೆಮಾರುಗಳಿಂದ ನಡೆದುಬಂದ ನಂಬಿಕೆ, ಭಕ್ತಿ ಮತ್ತು ಗ್ರಾಮಸ್ಥರ ಒಗ್ಗಟ್ಟಿನ ಜೀವಂತ ಸಂಕೇತ. ಮುಂಜಾನೆ 4ರಿಂದ 6ರವರೆಗೆ ಭಕ್ತಿಯ ಬೆಳಕಿನಲ್ಲಿ ಮಿಂದೇಳುವ ಬಾಗಲವಾಡ ಬಾಗಲವಾಡ ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಿಂದ ಆರಂಭವಾಗುವ ತಾಯಿಯ ಪಲ್ಲಕ್ಕಿ ಉತ್ಸವವು ಹಬ್ಬದ ಅತ್ಯಂತ ವಿಶೇಷ ಕ್ಷಣಗಳಲ್ಲಿ ಒಂದಾಗಿದೆ. ಮುಂಜಾನೆ ನಾಲ್ಕು ಗಂಟೆಯಿಂದ ಸುಮಾರು ಆರು ಗಂಟೆಯವರೆಗೆ ನಡೆಯುವ ಈ ಉತ್ಸವದಲ್ಲಿ ಭಕ್ತಿಯ ಪರವಶತೆ ಮತ್ತು ಸಂಪ್ರದಾಯದ ಸೊಬಗು ಅನಾವರಣಗೊಳ್ಳುತ್ತದೆ. ನಸುಕಿನ ಮೌನವನ್ನು ಭಕ್ತಿಗೀತೆಗಳು, ಜೈಕಾರಗಳು ಹಾಗೂ ಸಾಂಪ್ರದಾಯಿಕ ಆಚರಣೆಗಳು ಮಧುರವಾಗಿ ಭೇದಿಸುತ್ತವೆ. ಪಲ್ಲಕ್ಕಿ ಉತ್ಸವದೊಂದಿಗೆ ಹಂದಿಕೋಲು, ಪುರವಂತರ ಸಂಭ್ರಮ, ಬಸವಣ್ಣನ ಪ್ರವಚನಗಳು ಹಾಗೂ ದೇವಿಯ ಮಹಿಮೆಯನ್ನು ಸಾರುವ ಭಕ್ತಿಗೀತೆಗಳು ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡುತ್ತವೆ. ನಂದಿಕೋಲಿನೊಂದಿಗೆ ಸಾಗುವ ಭಕ್ತರು, ಉತ್ಸಾಹದಿಂದ ಪಾಲ್ಗೊಳ್ಳುವ ಯುವಕರು, ಸಂಪ್ರದಾಯದ ಸೊಬಗನು ಕಣ್ತುಂಬಿಕೊಳ್ಳುವ ಹಿರಿಯರು, ದೇವಿಯ ದರ್ಶನಕ್ಕಾಗಿ ಕಾಯುವ ಮಹಿಳೆಯರು ಹಾಗೂ ಸಂಭ್ರಮದಿಂದ ಓಡಾಡುವ ಪುಟಾಣಿ ಮಕ್ಕಳು?ಇವೆಲ್ಲವೂ ಸೇರಿ ಬಾಗಲವಾಡದ ದಸರಾ ಹಬ್ಬವನ್ನು ಒಂದು ಸುಂದರ ಸಾಂಸ್ಕೃತಿಕ ಚಿತ್ರವನ್ನಾಗಿಸುತ್ತವೆ. ಚಿಕ್ಕ ಮಕ್ಕಳು ತಮ್ಮ ಕುಟುಂಬದವರೊಂದಿಗೆ ಉತ್ಸವದಲ್ಲಿ ಪಾಲ್ಗೊಂಡು, ಹಿರಿಯರು ತಲೆಮಾರುಗಳಿಂದ ಕಾಪಾಡಿಕೊಂಡು ಬಂದ ಸಂಪ್ರದಾಯಗಳನ್ನು ಕಣ್ಣಾರೆ ಕಾಣುತ್ತಾರೆ. ಈ ಆಚರಣೆಗಳೇ ಮುಂದಿನ ಪೀಳಿಗೆಗೆ ನಮ್ಮ ನೆಲದ ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವ ಅಮೂಲ್ಯ ಪಾಠಗಳಾಗಿವೆ. ತವರುಮನೆಯತ್ತ ಹೆಣ್ಣುಮಕ್ಕಳ ಹೆಜ್ಜೆ ಹಬ್ಬದ ಸಂಭ್ರಮಕ್ಕೆ ಭಾವನಾತ್ಮಕ ಸ್ಪಶ ಬಾಗಲವಾಡದ ದಸರಾ ಹಬ್ಬಕ್ಕೆ ಮತ್ತೊಂದು ವಿಶೇಷವಾದ ಭಾವನಾತ್ಮಕ ಆಯಾಮವಿದೆ. ಅದು ದೂರದ ಊರುಗಳಲ್ಲಿ ನೆಲೆಸಿರುವ ಹೆಣ್ಣುಮಕ್ಕಳು ತವರುಮನೆಗೆ ಮರಳುವ ಸಂತಸದ ಕ್ಷಣ. ಮದುವೆಯಾಗಿ ಬೇರೆ ಊರುಗಳಲ್ಲಿ ಸಂಸಾರ ನಡೆಸುತ್ತಿರುವ ಹೆಣ್ಣುಮಕ್ಕಳು, ಉದ್ಯೋಗ ನಿಮಿತ್ತ ಸಾವಿರಾರು ಕಿಲೋಮೀಟರ್ ದೂರದಲ್ಲಿ ವಾಸಿಸುತ್ತಿರುವವರು ಹಾಗೂ ಬದುಕಿನ ಜವಾಬ್ದಾರಿಗಳಿಂದ ಊರಿನಿಂದ ದೂರವಾಗಿರುವವರು?ಈ ಹಬ್ಬದ ದಿನಗಳಲ್ಲಿ ತಮ್ಮೂರಿನತ್ತ ಮುಖ ಮಾಡುತ್ತಾರೆ. ಬಾಗಲವಾಡದ ಗ್ರಾಮ ದೇವತೆಯ ದಸರಾ ಮಹೋತ್ಸವವು ಕೇವಲ ಒಂಬತ್ತು ದಿನಗಳ ಧಾರ್ಮಿಕ ಆಚರಣೆಯಲ್ಲ; ಅದು ಸಾವಿರಾರು ಹೃದಯಗಳನ್ನು ಭಕ್ತಿಯ ಮೂಲಕ ಬೆಸೆಯುವ ಪವಿತ್ರ ಉತ್ಸವ. ತಾಯಿಯ ಪಲ್ಲಕ್ಕಿಯ ಮುಂದೆ ಕೈಮುಗಿದು ನಿಲ್ಲುವ ಭಕ್ತರ ನಂಬಿಕೆ, ತವರುಮನೆಗೆ ಮರಳುವ ಹೆಣ್ಣುಮಕ್ಕಳ



ಸಂತೋಷ, ಮಕ್ಕಳ ಮುಗ್ಧ ನಗು, ಹಿರಿಯರ ಆಶೀರ್ವಾದ, ಯುವಜನರ ಉತ್ಸಾಹ ಹಾಗೂ ಊರಿನ ಜನರ ಒಗ್ಗಟ್ಟು?ಇವೆಲ್ಲವೂ ಸೇರಿ ಈ ಹಬ್ಬವನ್ನು ಅಪೂರ್ವವಾಗಿಸುತ್ತವೆ.

ವರ್ಷಗಳು ಉರುಳಬಹುದು, ತಲೆಮಾರುಗಳು ಬದಲಾಗಬಹುದು; ಆದರೆ ನಮ್ಮ ಗ್ರಾಮ ದೇವತೆಯ ಮೇಲಿನ ಭಕ್ತಿ, ದಸರಾ ಹಬ್ಬದ ಮೇಲಿನ ಪ್ರೀತಿ ಹಾಗೂ ತವರುಮಣ್ಣಿನ ಮೇಲಿನ ಅಭಿಮಾನ ಎಂದಿಗೂ ಮಾಸುವುದಿಲ್ಲ. ತಾಯಿಯ ಪಲ್ಲಕ್ಕಿ ಸಾಗುವಾಗ ಮೊಳಗುವ ಜೈಕಾರದಲ್ಲಿ ಭಕ್ತಿಯಿದೆ; ತವರುಮನೆಗೆ ಮರಳುವ ಹೆಣ್ಣುಮಕ್ಕಳ ನಗುವಿನಲ್ಲಿ ಪ್ರೀತಿಯಿದೆ; ಮಕ್ಕಳ ಸಂಭ್ರಮದಲ್ಲಿ ಭವಿಷ್ಯದ ಭರವಸೆಯಿದೆ; ಗ್ರಾಮಸ್ಥರ ಒಗ್ಗಟ್ಟಿನಲ್ಲಿ ಬಾಗಲವಾಡದ ನಿಜವಾದ ಶಕ್ತಿಯಿದೆ. ತಾಯಿಯ ಕೃಪೆ ಬಾಗಲವಾಡ ಗ್ರಾಮದ ಪ್ರತಿಯೊಂದು ಕುಟುಂಬದ ಮೇಲೂ ಸದಾ ಇರಲಿ. ಗ್ರಾಮದ ಜನರೆಲ್ಲರಿಗೂ ಸುಖ, ಶಾಂತಿ, ಆರೋಗ್ಯ, ಸಮೃದ್ಧಿ ಹಾಗೂ ಸಂತೋಷವನ್ನು ಕರುಣಿಸಲಿ. ನಮ್ಮ ನಾಡಿನ ಸಂಪ್ರದಾಯ ಮತ್ತು ಸಂಸ್ಕೃತಿ ಮುಂದಿನ ಪೀಳಿಗೆಗಳಿಗೂ ಹೀಗೆ ಉಳಿದು ಬೆಳೆಯಲಿ. ಪುರವಂತರ ಹಾಡುಗಳು, ಶಾಸ್ತ್ರ ಹಾಕುವ ಸಂಪ್ರದಾಯ ? ಬಾಗಲವಾಡದ ಹಬ್ಬದ ವೈಶಿಷ್ಟ್ಯ ಬಾಗಲವಾಡ ಗ್ರಾಮದ ಗ್ರಾಮ ದೇವತೆಯ ದಸರಾ ಮಹೋತ್ಸವದಲ್ಲಿ ತುರುವು ಪುರವಂತರು ಹಾಡುವ ಸಾಂಪ್ರದಾಯಿಕ ಹಾಡುಗಳು ಉತ್ಸವಕ್ಕೆ ವಿಶೇಷ ಮೆರುಗು ನೀಡುತ್ತವೆ. ದೇವಿಯ ಮಹಿಮೆಯನ್ನು ಸಾರುವ ಹಾಡುಗಳು, ಪುರವಂತರ ಭಕ್ತಿಯುತ ಗಾಯನ ಹಾಗೂ ಉತ್ಸವದ ಸಡಗರ ಇಡೀ ಗ್ರಾಮವನ್ನು ಭಕ್ತಿಯ ಪರವಶತೆಯಲ್ಲಿ ಮುಳುಗಿಸುತ್ತವೆ. ಅವರ ಹಾಡುಗಳ ನಾದಕ್ಕೆ ತಕ್ಕಂತೆ ಸಾಗುವ ಉತ್ಸವವು ನಮ್ಮ ಪೂರ್ವಜರು ಉಳಿಸಿಕೊಂಡು ಬಂದಿರುವ ಸಂಸ್ಕೃತಿ ಮತ್ತು ಪರಂಪರೆಯ ಜೀವಂತ ಪ್ರತೀಕವಾಗಿದೆ. ಈ ಉತ್ಸವದಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಎಲ್ಲರೂ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ವಿಶೇಷವಾಗಿ ಮಕ್ಕಳಿಗೆ ಶಾಸ್ತ್ರ ಹಾಕಿಸುವ ಸಂಪ್ರದಾಯವು ಹಬ್ಬದ ಮತ್ತೊಂದು ವಿಶಿಷ್ಟ ಆಚರಣೆಯಾಗಿದೆ. ಪೋಷಕರು ತಮ್ಮ ಮಕ್ಕಳನ್ನು ಕರೆತಂದು ದೇವಿಯ ಸನ್ನಿಧಿಯಲ್ಲಿ ಸಂಪ್ರದಾಯದಂತೆ ಶಾಸ್ತ್ರ ಹಾಕಿಸುವ ಮೂಲಕ ತಾಯಿಯ ಆಶೀರ್ವಾದವನ್ನು ಕೋರುತ್ತಾರೆ. ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರೂ ಭಕ್ತಿಭಾವದಿಂದ ಈ ಆಚರಣೆಯಲ್ಲಿ ಭಾಗವಹಿಸುವ ದೃಶ್ಯವು ಉತ್ಸವದ ಸಡಗರವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಮಕ್ಕಳ ಮುಗ್ಧ ಮುಖದಲ್ಲಿನ ಸಂತೋಷ, ಪೋಷಕರ ಮನಸ್ಸಿನಲ್ಲಿನ ಭಕ್ತಿ, ಹಿರಿಯರ ಮಾರ್ಗದರ್ಶನ ಹಾಗೂ ಪುರವಂತರ ಹಾಡುಗಳ ಸಾಂಪ್ರದಾಯಿಕ ನಾದ?ಇವೆಲ್ಲವೂ ಸೇರಿ ಬಾಗಲವಾಡದ ದಸರಾ ಹಬ್ಬಕ್ಕೆ ವಿಶಿಷ್ಟವಾದ ಸಾಂಸ್ಕೃತಿಕ ಮೆರುಗನ್ನು ನೀಡುತ್ತವೆ. ಇದು ಕೇವಲ ಒಂದು ಆಚರಣೆಯಲ್ಲ; ನಮ್ಮ ಪೂರ್ವಜರು ನಮಗೆ ನೀಡಿದ ಸಂಪ್ರದಾಯವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ, ಭಕ್ತಿಯನ್ನು ಬೆಳೆಸುವ ಹಾಗೂ ಗ್ರಾಮದ ಜನರನ್ನು ಒಂದಾಗಿಸುವ ಪವಿತ್ರ ಪರಂಪರೆಯಾಗಿದೆ. ತಲೆಮಾರುಗಳಿಂದ ನಡೆದುಬಂದಿರುವ ಇಂತಹ ಆಚರಣೆಗಳು ಬಾಗಲವಾಡದ ಸಾಂಸ್ಕೃತಿಕ ಹೆಮ್ಮೆಯನ್ನು ಎತ್ತಿಹಿಡಿಯುತ್ತವೆ. ತುರುವು ಪುರವಂತರ ಹಾಡುಗಳು ಮೊಳಗಿದಾಗ, ಮಕ್ಕಳು ಶಾಸ್ತ್ರ ಹಾಕಿಸಿಕೊಳ್ಳುವಾಗ, ಹಿರಿಯರು ದೇವಿಯ ಮುಂದೆ ಕೈಮುಗಿದು ನಿಂತಾಗ?ಇಡೀ ಗ್ರಾಮವೇ ಭಕ್ತಿ ಮತ್ತು ಸಂಭ್ರಮದ ಸಂಗಮವಾಗಿ ಕಂಗೊಳಿಸುತ್ತದೆ. ಜೈ ಶ್ರೀ ಗ್ರಾಮ ದೇವತೆ! ಬಾಗಲವಾಡದ ಮಣ್ಣಿನ ಸೊಗಡಿನಲ್ಲಿ ಬೆರೆತಿರುವ ಭಕ್ತಿ ತವರುಮನೆಯ ಪ್ರೀತಿಯಲ್ಲಿ ಅರಳುವ ಸಂತೋಷ? ತಾಯಿಯ ಪಲ್ಲಕ್ಕಿಯೊಂದಿಗೆ ಮೆರೆಯುವ ಸಂಪ್ರದಾಯ ಇದೇ ನಮ್ಮ ಬಾಗಲವಾಡದ ದಸರಾ ಹಬ್ಬದ ನಿಜವಾದ ವೈಭವ.



**ಶ್ರೀ ಶಂಕರಪ್ಪ ಚಾಗಿ**
**ಪ್ರಥಮ ದರ್ಜೆ ಸಹಾಯಕರು**
**ಜಿಲ್ಲಾ ವಿಮಾ ಇಲಾಖೆ ಕೊಪ್ಪಳ**

ಭಾನುವಾರ 25–10–2026

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ 1.56 ಕೋಟಿ ವಿದೇಶಿ ಕರೆನ್ಸಿ ವಶ ; ಇಬ್ಬರ ಬಂಧನ



ಹೈದರಾಬಾದ್: ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು 1.56 ಕೋಟಿ ರೂಪಾಯಿ ಮೌಲ್ಯದ ವಿದೇಶಿ ಕರೆನ್ಸಿಯನ್ನು ವಶಪಡಿಸಿಕೊಂಡಿರುವ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ), ಇಬ್ಬರು ಪ್ರಯಾಣಿಕರನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿರ್ದಿಷ್ಟ ಗುಪ್ತಚರ ಮಾಹಿತಿಯ ಮೇರೆಗೆ, ಕಂದಾಯ ಗುಪ್ತಚರ ನಿರ್ದೇಶನಾಲಯದ ಹೈದರಾಬಾದ್ ವಲಯ ಘಟಕದ ಅಧಿಕಾರಿಗಳು ಹೈದರಾಬಾದ್‌ನಿಂದ ಮಲೇಷ್ಯಾದ ಕೌಲಾಲಂಪುರಕ್ಕೆ ಪ್ರಯಾಣಿಸಲು ಸಿದ್ಧರಾಗಿದ್ದ ಭಾರತೀಯ ಪುರುಷ ಪ್ರಯಾಣಿಕರೊಬ್ಬರನ್ನು ತಡೆಹಿಡಿದರು ಎಂದು ಪ್ರಕಟಣೆಯೊಂದು ತಿಳಿಸಿದೆ. ಅವರ ಕೈಚೀಲವನ್ನು (ಕ್ಯಾಬಿನ್ ಬ್ಯಾಗೇಜ್) ಪರಿಶೀಲಿಸಿದಾಗ, ಅಮೆರಿಕನ್ ಡಾಲರ್‌ಗಳು ಮತ್ತು ಮಲೇಷ್ಯಾ ರಿಂಗಿಟ್‌ಗಳು ಸೇರಿದಂತೆ ಸುಮಾರು 63.62 ಲಕ್ಷ ರೂಪಾಯಿ ಮೌಲ್ಯದ ವಿದೇಶಿ ಕರೆನ್ಸಿ ಪತ್ತೆಯಾಗಿದೆ. ಈ ಹಣವನ್ನು ಟ್ರಾಲಿ ಬ್ಯಾಗ್‌ನಲ್ಲಿ ಬಟ್ಟೆಗಳ ನಡುವೆ ಕಪ್ಪು ಪ್ಲಾಸ್ಟಿಕ್ ಕವರ್‌ನಲ್ಲಿ ಬಚ್ಚಿಡಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ. ಪ್ರಾಥಮಿಕ ವಿಚಾರಣೆಯ ವೇಳೆ, ಅದೇ ವಿಮಾನದಲ್ಲಿ ಮತ್ತೊಬ್ಬ ಮಹಿಳಾ ಪ್ರಯಾಣಿಕರೂ ಪ್ರತ್ಯೇಕ ಪ್ಯಾಸೆಂಜರ್ ನೇಮ್ ರೆಕಾರ್ಡ್ ಅಡಿಯಲ್ಲಿ ಪ್ರಯಾಣಿಸುತ್ತಿರುವುದು ಅಧಿಕಾರಿಗಳಿಗೆ ತಿಳಿದುಬಂದಿದೆ. ಅಧಿಕಾರಿಗಳು ಆ ಮಹಿಳೆಯ ಮೇಲೆ ನಿಗಾ ಇರಿಸಿ, ನಂತರ ಅವರನ್ನು ತಡೆಹಿಡಿದರು. ಅವರ ಕೈಚೀಲವನ್ನು ಪರಿಶೀಲಿಸಿದಾಗ, ಸುಮಾರು 91.94 ಲಕ್ಷ ರೂಪಾಯಿ ಮೌಲ್ಯದ 97,600 ಅಮೆರಿಕನ್ ಡಾಲರ್‌ಗಳು ಪತ್ತೆಯಾಗಿವೆ. ಈ ಹಣವನ್ನೂ ಟ್ರಾಲಿ ಬ್ಯಾಗ್‌ನಲ್ಲಿ ಬಟ್ಟೆಗಳ ನಡುವೆ ಕಪ್ಪು ಪ್ಲಾಸ್ಟಿಕ್ ಕವರ್‌ನಲ್ಲಿ ಬಚ್ಚಿಡಲಾಗಿತ್ತು ಎಂದು ಡಿಆರ್‌ಐ ತಿಳಿಸಿದೆ. ಈ ವಿದೇಶಿ ಕರೆನ್ಸಿಯನ್ನು ಕಾನೂನುಬದ್ಧವಾಗಿ ಪಡೆದಿರುವುದಕ್ಕೆ ಅಥವಾ ಸಾಗಿಸುತ್ತಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲು ಇಬ್ಬರೂ ಪ್ರಯಾಣಿಕರು ವಿಫಲರಾಗಿದ್ದಾರೆ ಎಂದು ಸಂಸ್ಥೆ ಹೇಳಿದೆ. ಸುಮಾರು 1.56 ಕೋಟಿ ರೂಪಾಯಿ ಮೌಲ್ಯದ ಸಂಪೂರ್ಣ ವಿದೇಶಿ ಕರೆನ್ಸಿಯನ್ನು, ಅದನ್ನು ಬಚ್ಚಿಡಲು ಬಳಸಿದ ಟ್ರಾಲಿ ಬ್ಯಾಗ್‌ಗಳೊಂದಿಗೆ ಕಸ್ಟಮ್ಸ್ ಕಾಯಿದೆ, 1962ರ ನಿಬಂಧನೆಗಳ ಅಡಿಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಇಬ್ಬರು ಪ್ರಯಾಣಿಕರನ್ನು ಬಂಧಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ರಷ್ಯಾ ಉಕ್ರೇನ್ ನಡುವೆ ಅ. 27ರಿಂದ ಸ್ಥಳೀಯ ಕದನ ವಿರಾಮ

ವಾಷಿಂಗ್ಟನ್: ಅಂತೂ ಇಂತೂ ರಷ್ಯಾ?ಉಕ್ರೇನ್ ನಡುವೆ ಕದನ ವಿರಾಮ ಘೋಷಣೆಯಾಗುವ ಸಾಧ್ಯತೆಗಳು ಗೋಚರಿಸುತ್ತಿವೆ. ಅಮೆ–ರಿಕದ ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್ ನೇತೃತ್ವದ ಮಾನವೀಯ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ಉಕ್ರೇನ್‌ನ ಉನ್ನತ ಸಮಾಲೋಚಕರು ತಡರಾತ್ರಿ ರಷ್ಯಾದೊಂದಿಗೆ ಸ್ಥಳೀಯ ಕದನ ವಿರಾಮವು ಅಕ್ಟೋಬರ್ 27ರಂದು ಪ್ರಾರಂಭವಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.



ಕಾರ್ಯಾಚರಣೆ ಪ್ರಾರಂಭವಾಗುವ ಎರಡು ದಿನಗಳ ಮೊದಲು ಆರಂಭವಾಗುವ ಈ ಕದನ ವಿರಾಮವು ಹಲವಾರು ದಿನಗಳವರೆಗೆ ಮುಂದುವ–ರಿಯಲಿದೆ ಎಂದು ಅವರು ಹೇಳಿದರು. ಉಕ್ರೇನಿಯನ್, ರಷ್ಯನ್ ಮತ್ತು ಅಮೆ–ರಿಕದ ಸಮಾಲೋಚಕರು ದಕ್ಷಿಣ ಉಕ್ರೇನ್‌ನ ಯುದ್ಧಪೀಡಿತ ಪ್ರದೇಶವಾದ ಖೇರ್ಸನ್‌ನಲ್ಲಿರುವ ರಷ್ಯಾ ಆಕ್ರಮಿತ ಪಟ್ಟಣವಾದ ಒಲೆಶ್ಕಿಯಲ್ಲಿ ಮಾನವೀಯ ನೆರವು ನೀಡಲು ಈ ಒಪ್ಪಂದ ಮಾಡಿಕೊಂಡಿದ್ದಾರೆ. ಉಕ್ರೇನ್‌ನ ಒಂಬುಡ್ಸ್‌ಮನ್ ಹಾಗೂ ಮಾತುಕತೆಯಲ್ಲಿ ಆ ದೇಶದ ಮುಖ್ಯ ಸಮಾಲೋಚಕರಾಗಿರುವ ಡಿಮಿಟ್ರೊ ಲುಬಿನೆಟ್ಸ್, ಕಾರ್ಯಾಚರಣೆಗೆ ಅಗತ್ಯವಾದ ಖೇರ್ಸನ್ ಪ್ರದೇಶ ಮತ್ತು ನೆರೆಯ ಪ್ರದೇಶಗಳಲ್ಲಿ ಕದನ ವಿರಾಮ ಜಾರಿಗೆ ಬರಲಿದೆ ಎಂದು ಹೇಳಿದರು. ಈ ಉಪಕ್ರಮವು ಭವಿಷ್ಯದ ಮಾನವೀಯ ಕಾರ್ಯಾಚರಣೆಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸಬಹುದು ಎಂದು ಅವರು ಅಭಿಪ್ರಾಯಪಟ್ಟರು.

## ಕಾರು ಅಪಘಾತದಲ್ಲಿ ಪ್ರಾಣಾಪಾಯದಿಂದ ಪಾರಾದ ಕಾಂಗ್ರೆಸ್ ಶಾಸಕ



ಮಲಪ್ಪುರಂ: ಇಂದು ನಸುಕಿನ ಜಾವ 2 ಗಂಟೆ ಸುಮಾರಿಗೆ ಇಲ್ಲಿನ ಕೋಝಿಚೇನಾ ಬಳಿಯ ರಾಷ್ಟ್ರೀಯ ಹೆದ್ದಾರಿ–66ರಲ್ಲಿ ಕಾಂಗ್ರೆಸ್ ಶಾಸಕ ಸಂದೀಪ್ ವಾರಿಯರ್ ಪ್ರಯಾಣಿಸುತ್ತಿದ್ದ ಕಾರಿನ ಟೈರ್ ಸಿಡಿದು ರಸ್ತೆ ಬದಿಯ ಗೋಡೆಗೆ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಶಾಸಕರು ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಪೊಲೀಸರ ಪ್ರಕಾರ, ಕಾಸರಗೋಡು ಜಿಲ್ಲೆಯ ತ್ರಿಕ್ಕರಿಪುರದಲ್ಲಿರುವ ತಮ್ಮ ಕ್ಷೇತ್ರದಿಂದ ಮಲಪ್ಪುರಂನ ಚಥಲ್ಲೂರ್‌ಗೆ ಪ್ರಯಾಣಿಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

ಟೈರ್ ಸಿಡಿದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ಗೋಡೆಗೆ ಡಿಕ್ಕಿ ಹೊಡೆಯಿತು ಎಂದು ಪೊಲೀಸರು ಹೇಳಿದ್ದಾರೆ. ಈ ಘಟನೆಯ ಬೆನ್ನಲ್ಲೇ, ಶಾಸಕರ ವಾಹನದ ಹಿಂದೆಯೇ ಬರುತ್ತಿದ್ದ ಮತ್ತೊಂದು ಕಾರು ಮೂರನೇ ವಾಹನವೊಂದಕ್ಕೆ ಡಿಕ್ಕಿ ಹೊಡೆಯಿತು ಎಂದು ಅವರು ತಿಳಿಸಿದ್ದಾರೆ. ಶಾಸಕರು ಸೇರಿದಂತೆ ಈ ಮೂರು ಕಾರುಗಳಲ್ಲಿದ್ದ ಎಲ್ಲ ಪ್ರಯಾಣಿಕರು ಯಾವುದೇ ಗಾಯಗಳಿಲ್ಲದೆ ಸುರಕ್ಷಿತವಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಸಂಚಾರ ದಟ್ಟಣೆಯನ್ನು ತಡೆಯಲು ಅಪಘಾತಕ್ಕೀಡಾದ ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

## ಎಲ್‌ಎಸಿಯಲ್ಲಿ ಭಾರತ–ಚೀನಾ ಉದ್ವಿಗ್ನತೆ : ಅರುಣಾಚಲ ಗಡಿ ಪ್ರದೇಶದಲ್ಲಿ ಪರಿಸ್ಥಿತಿ ಶಾಂತಿಯುತ



ನವದೆಹಲಿ: ಭಾರತ ಮತ್ತು ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ವಿಭಿನ್ನ ಗ್ರಹಿಕೆಗಳಿಂದಾಗಿ ಅರುಣಾಚಲ ಪ್ರದೇಶದ ಟಾಕ್ಸಿಂಗ್ ವೃತ್ತಕ್ಕೆ ಒಳಪಡುವ ಅಸಾಫಿಲಾ ಮತ್ತು ಲಾಂಗ್ಜು ಗಡಿ ಪ್ರದೇಶಗಳು ಸೂಕ್ಷ್ಮವಾಗಿವೆ. ಆದಾಗ್ಯೂ, ಪ್ರಸ್ತುತ ನೆಲದ ಪರಿಸ್ಥಿತಿ ಶಾಂತಿಯುತವಾಗಿದ್ದು, ಸಂಪೂರ್ಣ ನಿಯಂತ್ರಣದಲ್ಲಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ.

ಸಾಮಾನ್ಯ ಗಸ್ತು ಕಾರ್ಯಾಚರಣೆಗಳ ಸಮಯದಲ್ಲಿ ಎರಡೂ ದೇಶಗಳ ಸೈನಿಕರು ಮುಖಾಮುಖಿಯಾಗುವ ಸಾಧ್ಯತೆಗಳಿದ್ದರೂ, ಯಾವುದೇ ಹಿಂಸಾತ್ಮಕ ಘರ್ಷಣೆಗಳು ಸಂಭವಿಸಿಲ್ಲ. ಸ್ಥಳೀಯ ಕಮಾಂಡರ್‌ಗಳು ಸಂಯಮ ಕಾಯ್ದುಕೊಂಡಿದ್ದಾರೆ. ಉದ್ವಿಗ್ನತೆಯನ್ನು ಶಮನಗೊಳಿಸಲು ಧ್ವಜ ಸಭೆಗಳು, ಹಾಟ್‌ಲೈನ್ ಸಂವಹನ ಹಾಗೂ ಕಾರ್ಪ್ಸ್ ಕಮಾಂಡರ್ ಮಟ್ಟದ ಸಭೆಗಳಂತಹ ಮಿಲಿಟರಿ ಕಾರ್ಯವಿಧಾನಗಳನ್ನು ಬಳಸಲಾಗುತ್ತಿದೆ. ಗಡಿ ಪ್ರದೇಶಗಳಲ್ಲಿ ಭದ್ರತಾ ಪಡೆಗಳ ಉಪಸ್ಥಿತಿಯೊಂದಿಗೆ ರಸ್ತೆಗಳು, ಸೇತುವೆಗಳು, ದೂರಸಂಪರ್ಕ ಜಾಲಗಳು ಮತ್ತು ನಾಗರಿಕ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಇದು ಭದ್ರತಾ ಸಿಬ್ಬಂದಿಗೆ ಮಾತ್ರವಲ್ಲದೆ, ಸ್ಥಳೀಯ ಬುಡಕಟ್ಟು ಸಮುದಾಯಗಳ ಆರ್ಥಿಕ ಚಟುವಟಿಕೆಗಳು ಮತ್ತು ಸ್ವಾವಲಂಬನೆಗೂ ಪೂರಕವಾಗಿದೆ. ಸಶಸ್ತ್ರ ಪಡೆಗಳು ಗಡಿ ಪ್ರದೇಶದ ಜನರಿಗೆ ಉದ್ಯೋಗಾವಕಾಶ, ಆರೋಗ್ಯ ಶಿಬಿರಗಳು, ತುರ್ತು ವೈದ್ಯಕೀಯ ಸ್ಥಳಾಂತರ ಮತ್ತು ಶಾಲೆಗಳ ನಿರ್ಮಾಣದಂತಹ ಸೇವೆಗಳ ಮೂಲಕ ಬೆಂಬಲ ನೀಡುತ್ತಿವೆ.

ಈ ಪ್ರದೇಶವು ಗಡಿಯ ಎರಡೂ ಬದಿಗಳಲ್ಲಿರುವ ಬೌದ್ಧ ಸಮುದಾಯಗಳಿಗೆ ಪವಿತ್ರವಾದ ಐತಿಹಾಸಿಕ ತ್ಸಾರಿ ತೀರ್ಥಯಾತ್ರೆ ಸರ್ಕ್ಯೂಟ್ ಅನ್ನು ಹೊಂದಿದೆ. ಭವಿಷ್ಯದಲ್ಲಿ ಸ್ಥಿರತೆ ಕಾಯ್ದುಕೊಂಡರೆ ಮತ್ತು ಎರಡೂ ದೇಶಗಳ ನಡುವೆ ಒಪ್ಪಂದ ಏರ್ಪಟ್ಟರೆ, ಗಡಿಯಾಚೆಗಿನ ತೀರ್ಥಯಾತ್ರೆಗೆ ಅವಕಾಶಗಳು ಮುಕ್ತವಾಗಬಹುದು. ವಿವಾದಿತ ಗಡಿ ಪ್ರದೇಶಗಳಲ್ಲಿ ನಿರಂತರ ರಾಜತಾಂತ್ರಿಕ ಹಾಗೂ ಮಿಲಿಟರಿ ಮಟ್ಟದ ಮಾತುಕತೆಗಳ ಮೂಲಕ ಶಾಂತಿ ಕಾಯ್ದುಕೊಳ್ಳಲಾಗುತ್ತಿದ್ದು, ಭಾರತೀಯ ಸೇನೆಯು ಎಲ್‌ಎಸಿಯಲ್ಲಿ ಪರಿಸ್ಥಿತಿಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡುತ್ತಿದೆ.

**ಉದ್ವಿಗ್ನತೆ ನಿರ್ವಹಣೆ:**

ಗಡಿ ಪ್ರದೇಶಗಳಲ್ಲಿ ಎದುರಾಗುವ ಮುಖಾಮುಖಿಗಳನ್ನು ನಿಯಂತ್ರಿಸಲು ಭಾರತ ಮತ್ತು ಚೀನಾ ಸೇನೆಗಳು ಸ್ಥಾಪಿತ ಸಂವಹನ ವ್ಯವಸ್ಥೆಗಳನ್ನು ಬಳಸುತ್ತಿವೆ. ಧ್ವಜ ಸಭೆಗಳು ಹಾಗೂ ಹಾಟ್‌ಲೈನ್ ಸಂಪರ್ಕಗಳ ಮೂಲಕ ಸ್ಥಳೀಯ ಮಟ್ಟದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಇದ–ರಿಂದ ಸಣ್ಣಪುಟ್ಟ ಸಂಘರ್ಷಗಳು ದೊಡ್ಡ ಮಟ್ಟದ ಉದ್ವಿಗ್ನತೆಗೆ ಕಾರಣವಾಗುವುದನ್ನು ತಡೆಯಲು ಸಾಧ್ಯವಾಗುತ್ತಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ. ಎಲ್‌ಎಸಿ ಕುರಿತು ಭಿನ್ನಾಭಿಪ್ರಾಯಗಳಿರುವ ಪ್ರದೇಶಗಳಲ್ಲಿ ನಿರಂತರ ಸಂವಹನ ಮತ್ತು ಸಂಯಮ ಅತ್ಯಗತ್ಯ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಧಾರ್ಮಿಕ,

**ಸಾಂಸ್ಕೃತಿಕ ಸಂಪರ್ಕಕ್ಕೂ ಮಹತ್ವ:**

ಅಸಾಫಿಲಾ ಮತ್ತು ಲಾಂಗ್ಜು ಸುತ್ತಮುತ್ತಲಿನ ಗಡಿ ಪ್ರದೇಶಗಳು ಭದ್ರತಾ ದೃಷ್ಟಿಯಿಂದ ಮಾತ್ರವಲ್ಲದೆ, ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿಯೂ ಮಹತ್ವ ಹೊಂದಿವೆ. ಗಡಿಯ ಎರಡೂ ಬದಿಯ ಬೌದ್ಧ ಸಮುದಾಯಗಳಿಗೆ ಸಂಬಂಧಿಸಿದ ಐತಿಹಾಸಿಕ ತ್ಸಾರಿ ತೀರ್ಥಯಾತ್ರೆ ಮಾರ್ಗವೂ ಈ ಪ್ರದೇಶದ ಪ್ರಮುಖ ವಿಶೇಷತೆಗಳಲ್ಲಿ ಒಂದಾಗಿದೆ.

ಗಡಿ ಪ್ರದೇಶಗಳಲ್ಲಿ ಸೇನೆಯ ವತಿಯಿಂದ ಆರೋಗ್ಯ ಶಿಬಿರಗಳು, ತುರ್ತು ಸ್ಥಳಾಂತರ ಕಾರ್ಯಾಚರಣೆಗಳು, ಶಾಲಾ ನಿರ್ಮಾಣ ಹಾಗೂ ಸ್ಥಳೀಯ–ರಿಗೆ ಉದ್ಯೋಗಾವಕಾಶ ಕಲ್ಪಿಸುವಂತಹ ನಾಗರಿಕ–ಸೇನಾ ಸಹಕಾರದ ಚಟುವಟಿ–ಕೆಗಳೂ ನಡೆಯುತ್ತಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

## 2060ರ ವೇಳೆಗೆ ಪರಮಾಣು ಶಕ್ತಿಯ ಬಳಕೆ 3 ಪಟ್ಟು ಹೆಚ್ಚಳ ಸಾಧ್ಯತೆ : ವಿಶ್ವಸಂಸ್ಥೆ



ವಿಶ್ವಸಂಸ್ಥೆ: ಬರುವ 2060ರ ವೇಳೆಗೆ ಪರಮಾಣು ಶಕ್ತಿಯ ಬಳಕೆಯು ಮೂರು ಪಟ್ಟು ಹೆಚ್ಚಾಗಬಹುದು ಎಂದು ವಿಶ್ವಸಂಸ್ಥೆಯ ಪರಮಾಣು ಸಂಸ್ಥೆಯ ಮುಖ್ಯಸ್ಥರು ಅಭಿಪ್ರಾಯಪಟ್ಟಿದ್ದಾರೆ.ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯು ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಸಲ್ಲಿಸಿದ ವಾರ್ಷಿಕ ವರದಿಯಲ್ಲಿ ಮಾತನಾಡಿದ ರಾಫೆಲ್ ಗ್ರಾಸ್ಸಿ, ವಿದ್ಯುದ್ದೀಕರಣ, ಕೃತಕ ಬುದ್ಧಿಮತ್ತೆ ಚಾಲಿತ ಡೇಟಾ ಕೇಂದ್ರಗಳು ಮತ್ತು ತಂತ್ರಜ್ಞಾನ ಕಂಪನಿಗಳಿಗೆ ವಿಶ್ವಾಸಾರ್ಹ ಹಾಗೂ ಇಂಗಾಲ ಮುಕ್ತ ಶಕ್ತಿಯ ಅಗತ್ಯವಿರುವುದು ಈ ಬೆಳವಣಿಗೆಗೆ ಕಾರಣವಾಗಲಿದೆ ಎಂದು ತಿಳಿಸಿದರು.

ಹೆಚ್ಚು ಹೆಚ್ಚು ದೇಶಗಳು ತಮ್ಮ ಇಂಧನ ಭದ್ರತೆಯನ್ನು ಸುಧಾ–ರಿಸಲು ಪರಮಾಣು ಶಕ್ತಿಯನ್ನು ಪ್ರಮುಖ ಮಾರ್ಗವೆಂದು ಪರಿಗಣಿಸುತ್ತಿವೆ ಎಂದು ಅವರು ಹೇಳಿದರು. ಅಲ್ಲದೆ, ಪರಮಾಣು ಶಕ್ತಿಯು ಸೌರಶಕ್ತಿಗೆ ಸಮಾನವಾದುದು ಮತ್ತು ಇತರ ಎಲ್ಲ ಆಯ್ಕೆಗಳಿಗಿಂತ ಹೆಚ್ಚು ಸುರಕ್ಷಿತವಾಗಿದೆ ಎಂದು ಅವರು ಒತ್ತಿ ಹೇಳಿದರು. 2025ರಲ್ಲಿ, 30ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 400ಕ್ಕೂ ಹೆಚ್ಚು ರಿಯಾಕ್ಟರ್‌ಗಳು ಜಾಗತಿಕ ವಿದ್ಯುತ್ ಉತ್ಪಾದನೆಯ ಶೇ.10ರಷ್ಟನ್ನು ಮತ್ತು ಕಡಿಮೆ ಇಂಗಾಲ ಹೊರಸೂಸುವ ವಿದ್ಯುತ್ ಉತ್ಪಾದನೆಯ ಕಾಲು ಭಾಗವನ್ನು ಒದಗಿಸಿವೆ ಎಂದು ಮಹಾನಿರ್ದೇಶಕರು ಹೇಳಿದರು.

60ಕ್ಕೂ ಹೆಚ್ಚು ಹೊಸ ರಿಯಾಕ್ಟರ್‌ಗಳು ನಿರ್ಮಾಣ ಹಂತದಲ್ಲಿವೆ ಮತ್ತು ಭವಿಷ್ಯದ ಪರಮಾಣು ಶಕ್ತಿ ಸಾಮರ್ಥ್ಯದ ಅಂದಾಜುಗಳು ಗಣನೀಯವಾಗಿ ಏರಿಕೆಯಾಗಿವೆ.ಶಾಂತಿಯುತ ಉದ್ದೇಶಗಳಿಗಾಗಿ ಪರಮಾಣು ಶಕ್ತಿಯ ಬಳಕೆ ಹೆಚ್ಚಾಗುತ್ತಿರುವ ಬಗ್ಗೆ ಮಾತನಾಡಿದ ಗ್ರಾಸ್ಸಿ, ಇರಾನ್ ಮತ್ತು ಉತ್ತರ ಕೊರಿಯಾದ ಪರಮಾಣು ಕಾರ್ಯಕ್ರಮಗಳು, ಉಕ್ರೇನ್ ಯುದ್ಧದಿಂದಾಗಿ ಪರಮಾಣು ಸುರಕ್ಷತೆಗೆ ಎದುರಾಗಿರುವ ಅಭೂತಪೂರ್ವ ಬೆದರಿಕೆಗಳು ಹಾಗೂ ಕೆಲವು ದೇಶಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ಪಡೆಯುವ ಬಗ್ಗೆ ಚರ್ಚಿಸುತ್ತಿರುವ ಆತಂಕಕಾರಿ ವರದಿಗಳ ಬಗ್ಗೆಯೂ ಪ್ರಸ್ತಾಪಿಸಿದರು. ಇರಾನ್ ವಿಷಯಕ್ಕೆ ಬಂದರೆ, ಅಲ್ಲಿನ ಪರಮಾಣು ತಾಣಗಳ ಮೇಲೆ ಕಳೆದ ವರ್ಷ ಅಮೆ–ರಿಕ ದಾಳಿ ನಡೆಸಿತ್ತು. ಈ ಬಗ್ಗೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಗೆ ಮಾಹಿತಿ ನೀಡಿದ ಗ್ರಾಸ್ಸಿ, ರಾಜತಾಂತ್ರಿಕ ಒಪ್ಪಂದವೊಂದಕ್ಕೆ ಅಗತ್ಯವಾದ ತಾಂತ್ರಿಕ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದರು.

ರಾಜತಾಂತ್ರಿಕ ಪರಿಹಾರವನ್ನು ಕಂಡುಕೊಳ್ಳಲು ಸಂಬಂಧಪಟ್ಟ ಪಕ್ಷಗಳು ತಮ್ಮ ಪ್ರಯತ್ನಗಳನ್ನು ತೀವ್ರಗೊಳಿಸಬೇಕು. ಈ ಪ್ರಕ್ರಿಯೆಯಲ್ಲಿ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಪರಿಶೀಲನಾ ಪಾತ್ರ ಅತ್ಯಗತ್ಯ. ಅದು ಇಲ್ಲದೆ ಯಾವುದೇ ಒಪ್ಪಂದವು ದೀರ್ಘಕಾಲ ಉಳಿಯಲು ಸಾಧ್ಯವಿಲ್ಲ ಎಂದು ಅವರು ಹೇಳಿದರು. ಉಕ್ರೇನ್‌ನಲ್ಲಿ ಯುರೋಪಿನ ಅತಿದೊಡ್ಡ ಜಪೋರಿಝಿಯಾ ಪರಮಾಣು ವಿದ್ಯುತ್ ಸ್ಥಾವರವನ್ನು ಅವರು ಪ್ರತ್ಯೇಕವಾಗಿ ಉಲ್ಲೇಖಿಸಿದರು. ಆಗಾಗ್ಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ, ಸೀಮಿತ ಬ್ಯಾಕಪ್ ಡೀಸೆಲ್ ಪೂರೈಕೆ ಹಾಗೂ ಸ್ಥಾವರ ಮತ್ತು ಅಲ್ಲಿ ಕೆಲಸ ಮಾಡುವ ಜನರಿಗೆ ಬೆದರಿಕೆ ಒಡ್ಡುವ ಮಿಲಿಟರಿ ಚಟುವಟಿಕೆಗಳಿಂದಾಗಿ ಅದು ಅನಿಶ್ಚಿತ ಸ್ಥಿತಿಯಲ್ಲಿದೆ ಎಂದು ಹೇಳಿದರು.

ಸುಮಾರು ಎರಡು ದಶಕಗಳ ಅನಿಶ್ಚಿತತೆಯ ನಂತರ ಸಿರಿಯಾದ ಪರಮಾಣು ಚಟುವಟಿಕೆಗಳಿಗೆ ಸಂಬಂಧಿಸಿದ ಬಾಕಿ ಇರುವ ಪ್ರಶ್ನೆಗಳನ್ನು ಸ್ಪಷ್ಟಪಡಿಸುವಲ್ಲಿ ಮತ್ತು ಪರಿಹ–ರಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ ಎಂದು ಗ್ರಾಸ್ಸಿ ಹೇಳಿದರು. ಮಧ್ಯಂತರ ಅಧ್ಯಕ್ಷ ಅಹ್ಮದ್ ಅಲ್–ಶರಾ ಅವರ ಸರ್ಕಾರದೊಂದಿಗೆ ನಡೆಸಿದ ಮಾತುಕತೆಗಳ ಪರಿಣಾಮವಾಗಿ ಈ ಪ್ರಗತಿ ಸಾಧ್ಯವಾಗಿದೆ ಎಂದು ಅವರು ತಿಳಿಸಿದರು.

## 60,000 ಸ್ವಯಂಸೇವಕರ 'ನಾಗರಿಕ ರಕ್ಷಣಾ ಜಾಲ' ರೂಪಿಸಲು ಮುಂದಾದ ಕೇಂದ್ರ




ನವದೆಹಲಿ: ದೇಶದ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು 60,000 ಸ್ವಯಂ ಸೇವಕರನ್ನು ಒಳಗೊಂಡ ನಾಗರಿಕ ರಕ್ಷಣಾ ಜಾಲ ರೂಪಿಸಲು ಕೇಂದ್ರ ಗೃಹ ಸಚಿವಾಲಯ ತೀರ್ಮಾನಿಸಿದೆ.

ಇದಕ್ಕಾಗಿ ಭಾರತೀಯ ಸೇನೆಯೊಂದಿಗೆ ಸೇರಿ ವಿಶೇಷವಾದ ಜಂಟಿ ತರಬೇತಿಯನ್ನು ಆಯೋಜಿಸಲಿದೆ ಎಂದು ಸಚಿವಾಲಯದ ಅಧಿಕೃತ ಹೇಳಿಕೆ ತಿಳಿಸಿದೆ. ಈ ಉಪಕ್ರಮದ ಮೊದಲ ಹಂತದಲ್ಲಿ, ಭಾಗವಹಿಸುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನಾಗರಿಕ ರಕ್ಷಣಾ ಮಾಸ್ಟರ್ ತರಬೇತುದಾರರಿಗೆ ಮೂರು ದಿನಗಳ ವಿಶೇಷ ತರಬೇತಿಯನ್ನು ನೀಡಲಾಗುವುದು ಎಂದು ಗೃಹ ಸಚಿವಾಲಯ ತಿಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಮಂಡಿಸಿದ ದೂರದೃಷ್ಟಿಯಿಂದ ಈ ಉಪಕ್ರಮವು ರೂಪುಗೊಂಡಿದೆ. ಉದಯೋನ್ಮುಖ ಭದ್ರತಾ ಸವಾಲುಗಳನ್ನು ಎದುರಿಸಲು, ಆಧುನಿಕ ವ್ಯವಸ್ಥೆಗಳು, ತಂತ್ರಜ್ಞಾನಗಳು ಮತ್ತು ಸಮಕಾಲೀನ ಸನ್ನದ್ಧತಾ ಸಾಮರ್ಥ್ಯಗಳನ್ನು ಹೊಂದಿರುವ ಸಕ್ರಿಯ ನಾಗರಿಕ ರಕ್ಷಣಾ ಜಾಲವನ್ನು ನಿರ್ಮಿಸುವುದು ಅವರ ಆಶಯವಾಗಿತ್ತು. ಈ ದೂರದೃಷ್ಟಿಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ, ಗೃಹ ಸಚಿವಾಲಯದ ಅಧೀನದಲ್ಲಿರುವ ಅಗ್ನಿಶಾಮಕ ಸೇವೆಗಳು, ನಾಗರಿಕ ರಕ್ಷಣೆ ಮತ್ತು ಹೋಮ್ ಗಾರ್ಡ್‌ಗಳ ಮಹಾನಿರ್ದೇಶನಾಲಯ, ಭಾರತೀಯ ಸೇನೆಯ ಮೂಲಕ ನಾಗರಿಕ ರಕ್ಷಣಾ ಮಾಸ್ಟರ್ ತರಬೇತುದಾರರಿಗೆ ವಿಶೇಷ ತರಬೇತಿ ನೀಡುವ ಮೂಲಕ ನಾಗರಿಕ ರಕ್ಷಣಾ ಸನ್ನದ್ಧತೆಯನ್ನು ಬಲಪಡಿಸುವ ಒಂದು ವಿಶಿಷ್ಟ ಪ್ರಾಯೋಗಿಕ ಯೋಜನೆಯನ್ನು ಕೈಗೊಂಡಿದೆ ಎಂದು ಹೇಳಿಕೆ ತಿಳಿಸಿದೆ. ನವೆಂಬರ್ 2026ರ ಎರಡನೇ ವಾರದೊಳಗೆ, ಭಾರತೀಯ ಸೇನೆಯ ನಿಗದಿತ ತರಬೇತಿ ಕೇಂದ್ರಗಳಲ್ಲಿ ಮೂರು ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದ ಮೂಲಕ 600 ನಾಗರಿಕ ರಕ್ಷಣಾ ಮಾಸ್ಟರ್ ತರಬೇತುದಾರರಿಗೆ ತರಬೇತಿ ನೀಡಲಾಗುವುದು. ಇದರಲ್ಲಿ ಭಾಗವಹಿಸುವ ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಿಂದ ತಲಾ 50 ಮಂದಿ ತರಬೇತುದಾರರು ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ, ಗುಜರಾತ್, ದೆಹಲಿ, ಮೇಘಾಲಯ, ಸಿಕ್ಕಿಂ, ಅಸ್ಸಾಂ, ಉತ್ತರ ಪ್ರದೇಶ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಇದರಲ್ಲಿ ಭಾಗವಹಿಸುತ್ತಿವೆ ಎಂದು ಹೇಳಿಕೆ ತಿಳಿಸಿದೆ. ಸಮಕಾಲೀನ ಭದ್ರತಾ ಬೆದ–ರಿಕೆಗಳು, ಪ್ರತಿಕೂಲ ಸನ್ನಿವೇಶಗಳು ಮತ್ತು ತುರ್ತು ಪರಿಸ್ಥಿತಿಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಲು ನಾಗರಿಕ ರಕ್ಷಣಾ ಸಿಬ್ಬಂದಿಯ ಸನ್ನದ್ಧತೆಯನ್ನು ಹೆಚ್ಚಿಸುವುದು ಈ ಉಪಕ್ರಮದ ಉದ್ದೇಶವಾಗಿದೆ. ಈ ಉಪಕ್ರಮದ ಮೂಲಕ ಭಾಗವಹಿಸುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 60,000 ನಾಗರಿಕ ರಕ್ಷಣಾ ಸ್ವಯಂಸೇವಕರನ್ನು ಸಿದ್ಧಪಡಿಸುವ ಗುರಿ ಹೊಂದಲಾಗಿದ್ದು, ಇದು ಈ ವ್ಯವಸ್ಥೆಯ ವ್ಯಾಪ್ತಿ ಮತ್ತು ಪ್ರಭಾವವನ್ನು ಗಮನಾರ್ಹವಾಗಿ ವಿಸ್ತ–ರಿಸಲಿದೆ ಎಂದು ಹೇಳಿಕೆ ತಿಳಿಸಿದೆ.

## ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮತ್ತೆ ಲಘು ಭೂಕಂಪ



ದೊಡ್ಡಬಳ್ಳಾಪುರ: ನಿನ್ನೆ ಬೆಳಗ್ಗೆಯಷ್ಟೇ ತೂಬಗೆರೆ ವ್ಯಾಪ್ತಿಯಲ್ಲಿ ಸಂಭವಿಸಿದ ಭೂ ಕಂಪನದ ಬೆನ್ನಲ್ಲೇ ಇಂದು ತಾಲ್ಲೂಕಿನ ಆರೂಢಿ ಹಾಗೂ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವೀರಮನಹಳ್ಳಿ ನಡುವಿನ ಪ್ರದೇಶದಲ್ಲಿ ಇಂದು ಕೂಡ ಮುಂಜಾನೆ ಲಘು ಭೂಕಂಪ ಸಂಭವಿಸಿದೆ.

ರಿಕ್ಟರ್ ಮಾಪಕದಲ್ಲಿ 2.9 ತೀವ್ರತೆಯ ಕಂಪನ ದಾಖಲಾಗಿದೆ. ಮುಂಜಾನೆ 3 ಗಂಟೆ 29 ನಿಮಿಷ 42 ಸೆಕೆಂಡ್‌ಗೆ ಭೂಕಂಪ ಸಂಭವಿಸಿದೆ ಎಂದು ಭೂಕಂಪನದ ದತ್ತಾಂಶ ತಿಳಿಸಿದೆ. ಭೂಕಂಪದ ಕೇಂದ್ರಬಿಂದು 13.497 ಅಕ್ಷಾಂಶ ಹಾಗೂ 77.420 ರೇಖಾಂಶದಲ್ಲಿದ್ದು, ಭೂಮಿಯ ಮೇಲೆ ? ಯಿಂದ 5 ಕಿಲೋಮೀಟರ್ ಆಳದಲ್ಲಿ ಕಂಪನ ದಾಖಲಾಗಿದೆ. ಭೂಕಂಪನದ ತೀವ್ರತೆ ಕಡಿಮೆ ಮಟ್ಟದಲ್ಲಿದ್ದು, ಘಟನೆಯನ್ನು ಪರಿಶೀಲಿಸಲಾಗಿದೆ ಎಂದು ದತ್ತಾಂಶದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಈ ಘಟನೆಯಿಂದ ಯಾವುದೇ ಹಾನಿ ಅಥವಾ ಸಾರ್ವಜನಿಕರಿಗೆ ಕಂಪನದ ಅನುಭವವಾಗಿದೆಯೇ ಎಂಬ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ತಾಲೂಕಿನ ತೂಬಗೆರೆ ಗ್ರಾಮದ ಸುತ್ತಮುತ್ತ ನಿನ್ನೆ ಬೆಳಿಗ್ಗೆ ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.0 ತೀವ್ರತೆ ದಾಖಲಾಗಿದೆ. ಭೂಕಂಪನದಿಂದ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ತಿಳಿಸಿದೆ.

ಬೆಳಿಗ್ಗೆ 9 ಗಂಟೆ 1 ನಿಮಿಷ 59 ಸೆಕೆಂಡ್‌ಗೆ ಭೂಕಂಪನ ದಾಖಲಾಗಿದ್ದು, ತೂಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಮೋಜನಹಳ್ಳಿ ಗ್ರಾಮದ ಸಮೀಪ ಭೂಕಂಪನದ ಕೇಂದ್ರಬಿಂದು ಪತ್ತೆಯಾಗಿದೆ. ಮೋಜನಹಳ್ಳಿ ಗ್ರಾಮದಿಂದ ಸುಮಾರು 500 ಮೀಟರ್ ಉತ್ತರಕ್ಕೆ ಹಾಗೂ ಭೂಮಿಯ ಸುಮಾರು 10 ಕಿಲೋಮೀಟ–ರ್ ಆಳದಲ್ಲಿ ಭೂಕಂಪನ ಸಂಭವಿಸಿದೆ ಎಂದು ಕೆಎಸ್‌ಎನ್‌ಡಿಎಂಸಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ನರಗನಹಳ್ಳಿ, ತೂಬಗೆರೆ ಹಾಗೂ ಕಾರನಾಳ ಗ್ರಾಮಗಳ ಸಮೀಪ ಕೇಂದ್ರಬಿಂದು ಗುರುತಿಸಲಾಗಿದ್ದು, ಕೇಂದ್ರಬಿಂದುವಿನಿಂದ ಸುಮಾರು 20ರಿಂದ 30 ಕಿಲೋಮೀಟ–ರ್ ವ್ಯಾಪ್ತಿಯಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ. ಭೂಕಂಪನದ ತೀವ್ರತೆ ಕಡಿಮೆಯಾಗಿದ್ದು, ಯಾವುದೇ ಹಾನಿ ಅಥವಾ ಅನಾಹುತ ಸಂಭವಿಸಿರುವ ಬಗ್ಗೆ ವರದಿಯಾಗಿಲ್ಲ. ಭೂಕಂಪನ ಸಂಭವಿಸಿದ ಪ್ರದೇಶವು ಭೂಕಂಪ ವಲಯ–2ರ ವ್ಯಾಪ್ತಿಗೆ ಒಳಪಡುತ್ತದೆ. ಹೀಗಾಗಿ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಕೆಎಸ್‌ಎನ್‌ಡಿಎಂಸಿ ಸ್ಪಷ್ಟಪಡಿಸಿದೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com